ಶೂನ್ಯವಲ್ಲದೆ ಬೇರೆ



ಬಿ. ಕೆ. ರವೀಂದ್ರ

ಶೂನ್ಯವಲ್ಲದೆ ಬೇರೆ

ಬೆಂ ಶ್ರೀ ರವೀಂದ್ರ

ಹಚ್ಚೇವು ಕನ್ನಡದ ದೀಪ

ಸಮನ್ವಯ ಸಮಿತಿ
(ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್
ಜಯಚಾಮರಾಜ ರಸ್ತೆ
ಬೆಂಗಳೂರು – ೫೬೦ ೦೦೧

SHOONYAVALLADE BERE :
A collection of Poems written by B. S. Ravindra,
'Shri Arundhathi'. 330, Fort, Bangalore - 560 002.

Published by : Samanvya Samithi [Bharathiya State Bank Kannada Sanghagalu] C/o Stare Bank of India. J. C. Road Bangalore - 560 002


Pages : 64 Copies : 1000 Price : Rs. 25-00 First Edition : 1996

ಪ್ರಕಾಶಕರು·
ಸಮನ್ವಯ ಸಮಿತಿ
(ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)
ಭಾರತೀಯ ಸ್ಟೇಟ್ ಬ್ಯಾಂಕ್
ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು - ೫೬೦ ೦೦೨

ಬೆಲೆ : ರೂ. 25-00

ಮುಖಪುಟ : ವೈ. ಸುದರ್ಶನ

ಮುದ್ರಕರು :
ಸಿಂಹ ಪ್ರಿಂಟರ್ಸ್, ಚಾಮರಾಜಪೇಟೆ, ಬೆಂಗಳೂರು - ೫೬೦ ೦೧೮



ನನ್ನ ತಾಯಿ ಅರುಂಧತಿಗೆ

ಮುನ್ನುಡಿ

ಬೆಂ ಶ್ರೀ ರವೀಂದ್ರ ಅವರು ಚಿಕ್ಕ ಹುಡುಗನಾಗಿದ್ದಾಗಿನಿಂದಲೂ ನಾನು ಅವರನ್ನು ಬಲ್ಲೆ. ಮೈಸೂರಿನ ಅಗ್ರಹಾರವೊಂದರಲ್ಲಿ, ನಮ್ಮ ಎದುರು ಮನೆಯಲ್ಲಿ, ತಮ್ಮ ಅಜ್ಜಿಯ ಸೆರಗಿನ ಮರೆಯಿಂದ ನಗುನಗುತ್ತ ಇಣುಕಿ ನೋಡುತ್ತ ನಿಲ್ಲುತ್ತಿದ್ದ ಹುಡುಗನ ಚಿತ್ರ ಈಗಲೂ ನನಗೆ ನೆನಪುಂಟು.

ಅನಂತರ ನಮ್ಮಿಬ್ಬರ ದಾರಿಗಳು ದೂರದೂರ ಸರಿದವು. ನಾನು ಅಗ್ರಹಾರ ಬಿಟ್ಟು ವಿಸ್ತರಣವೊಂದರಲ್ಲಿ ಮನೆ ಮಾಡಿದೆ. ಬೆಂಗಳೂರಿನಿಂದ ಆಗಾಗ ಅಜ್ಜಿಯ ಮನೆಗೆ ಬರುತ್ತಿದ್ದ ಈ ಹುಡುಗನನ್ನು ನಾನು ಸ್ವಲ್ಪ ಕಾಲ ಮರೆತಿದ್ದೆ.

ಅನಂತರ ಒಂದು ದಿನ ; ಸುಮಾರು ಮೂವತ್ತು ವರ್ಷಗಳ ಅನಂತರ; ವ್ಯವಹಾರ ಕ್ಷೇತ್ರದಲ್ಲಿ ಕನ್ನಡವನ್ನು ಬಳಸುವ ಬಗ್ಗೆ, ಬೆಳೆಸುವ ಬಗ್ಗೆ ವಿಚಾರ ವಿನಿಮಯಕ್ಕಾಗಿ ಬೆಂಗಳೂರಿನಲ್ಲಿ ಸಭೆಯೊಂದು ಸೇರಿತ್ತು. 'ಇವರು ಬೆಂ ಶ್ರೀ ರವೀಂದ್ರ. ಇವರೊಬ್ಬ ನವ್ಯಕವಿ. ಸಂಘಟನಾಚತುರ, ರಾಜಕಾರಣಿಯ ಲಕ್ಷಣಗಳನ್ನೂ ತೋರಿಸಿಕೊಳ್ಳುತ್ತಿದ್ದಾರೆ' ಎಂದು ಯಾರೋ ಇವರ ಪರಿಚಯ ಮಾಡಿಕೊಟ್ಟರು.

ಕವಿಯಾದವರು ರಾಜಕಾರಣಿಯೂ ಆಗಿರುವುದು ಹೇಗೆ ಸಾಧ್ಯ ? ಎಂದು ಒಂದು ಕ್ಷಣ ನನಗೆ ವಿಸ್ಮಯವಾಯಿತು. ಏಕಕಾಲದಲ್ಲಿ ಕವಿಯೂ ರಾಜಕಾರಣಿಯೂ ಆಗಿರುವವರ ಹೆಸರುಗಳನ್ನು ಮನಸ್ಸು ತಡಕಾಡಿತು.

ಇವರನ್ನು ಎಲ್ಲೋ ನೋಡಿದ್ದೇನಲ್ಲ ? ಎಂದುಕೊಂಡೆ. ಆಮೇಲೆ ತಿಳಿಯಿತು. ಅಗ್ರಹಾರದಲ್ಲಿ ನಮ್ಮ ಎದುರು ಮನೆಯಿಂದ ಅಜ್ಜಿಯ ಸೀರೆಯ ಸೆರಗಿನ ಮರೆಯಲ್ಲಿ ಇಣುಕಿ ಹಾಕುತ್ತಿದ್ದ ಪೋರ ಇವರೇ ಎಂದು ದೃಢಪಟ್ಟಿತು.

ಈಗಲೂ ರವೀಂದ್ರರನ್ನು ನೋಡಿದಾಗಲೆಲ್ಲ ನನ್ನ ಮನಸ್ಸಿನಲ್ಲಿ ಅಂದಿನ ಚಿತ್ರ ಸೂಪರ್ ಇಂಪೋಸ್ ಆಗುತ್ತದೆ. ಈ ರೂಪದ ಮೇಲೆ ಆ ರೂಪ ಕೂರುತ್ತದೆ.

ಕಾವ್ಯಗುಣ, ಮುತ್ಸದ್ದಿತನ - ಎರಡನ್ನೂ ರವೀಂದ್ರ ಮೈಗೂಡಿಸಿಕೊಂಡಿದ್ದಾರೆ ; ಎಲ್ಲರಿಗೂ ಮೆಚ್ಚುಗೆಯಾಗುವ ರೀತಿಯಲ್ಲಿ ಎರಡನ್ನೂ ಹೊಂದಿಸಿಕೊಂಡಿದ್ದಾರೆ. ಇವರ ಒಂದು ಮಗ್ಗುಲು ಕವಿಯಾದರೆ, ಇನ್ನೊಂದು ಮಗ್ಗುಲು ಮುತ್ಸದ್ದಿ.

ಸಂಘಟನೆಯ ಕ್ಷೇತ್ರಕ್ಕೆ ಇಳಿದವರು ಅನೇಕ ವೇಳೆ ಬಿರುಸಿನ ಸೂಕ್ಷ್ಮ ಸನ್ನಿವೇಶಗಳಿಗೆ ಇದಿರು ಬದಿರು ಆಗುತ್ತಾರೆ. ತಮ್ಮೊಳಗಿನ ಸೂಕ್ಷ್ಮ ಸಂವೇದನೆಗಳನ್ನು ಗುರುತಿಸಿ ಅಭಿವ್ಯಕ್ತಿಸುವುದು ಅವರಿಗೆ ಕಷ್ಟವಾಗುತ್ತಾ ಹೋಗುತ್ತದೆ. ಆದರೆ ರವೀಂದ್ರರು ಸಂಘಟನೆಯ ಕ್ಷೇತ್ರದಲ್ಲಿ ಮುಂದುವರಿದಂತೆ ಕವನಗಳನ್ನೂ ಬರೆಯುತ್ತಲೇ ಬಂದಿದ್ದಾರೆ. ಕವನಗಳನ್ನು ಬರೆಯುವಷ್ಟೇ ಸಮರ್ಥವಾಗಿ ಇವರು ಗದ್ಯವನ್ನೂ ಬರೆಯಬಲ್ಲರು, ಒಂದೆರಡು ಬಾರಿ ನಾನೇ ಇವರ ಬರವಣಿಗೆಗೆ ವಸ್ತುವಾಗಿದ್ದೇನೆ.

ಇಂಥವರು ಇದೀಗ ತಮ್ಮ ಕವನ ಸಂಕಲನವೊಂದನ್ನು ಹೊರತರುತ್ತಿರುವುದಾಗಿ ಹೇಳಿದಾಗ, ನನಗೆ ಆಶ್ಚರ್ಯವಾಗಲಿಲ್ಲ ; 'ಏಕೆ ಇಷ್ಟು ತಡ ?' ಎನಿಸಿತು. ತಡವಾದರೂ ಚಿಂತೆಯಿಲ್ಲ. ಸಂಕಲನ ಹೊರಬರುತ್ತಿದೆಯಲ್ಲ, ಎಂದು ಸಂತೋಷವಾಯಿತು.

ಆದರೆ ಇದಕ್ಕೆ ಮುನ್ನುಡಿ ಬರೆಯಬೇಕೆಂದು ಹಕ್ಕೊತ್ತಾಯ ಮಾಡಿದಾಗ ಆತಂಕವಾಯಿತು. ಇಂಥವರ ಒತ್ತಾಯವನ್ನು ಸಹಿಸಿಕೊಳ್ಳುವುದೇ ಕಷ್ಟ. ಜೊತೆಗೆ ಹಕ್ಕೂ ಸೇರಿದರೆ ಏನು ಗತಿ ! ಊಹಿಸಿಕೊಳ್ಳಬಹುದು.

ರವೀಂದ್ರರ ಕವನಗಳು 'ಶೂನ್ಯವಲ್ಲದೆ ಬೇರೆ' ಇದರಿಂದಾಗಿ ನನಗೆ ಸಂತೋಷವಾಗಿದೆ. ಇವರು ನಿತ್ಯ ವ್ಯವಸಾಯವನ್ನು ನಿರಂತರವಾಗಿ ನಡೆಸಿಕೊಂಡು ಬಂದಿಲ್ಲವಾದ್ದರಿಂದ ಇಲ್ಲಲ್ಲಿ ಸ್ವಲ್ಪಮಟ್ಟಿಗೆ ಇವರ ಲೇಖನಿ ತಡವರಿಸಿದೆಯೆನಿಸಿದರೂ, ಶೈಥಿಲ್ಯ ಕಂಡು ಬಂದಿದೆಯೆನಿಸಿದರೂ, ಸಂಕಲನದ ಉದ್ದಕ್ಕೂ ಆರೋಗ್ಯಕರವಾದ ಲಕ್ಷಣಗಳನ್ನು ಕಾಣಬಹುದು. ಜೀವಂತಿಕೆಯಿದೆ. ಉದ್ದಕ್ಕೂ ಓತಪ್ರೋತವಾಗಿ ಹರಿದಿರುವ ಕಾವ್ಯಗುಣ ನಮ್ಮ ಮನಸ್ಸನ್ನು ಬೆಚ್ಚಗೆ ಮಾಡುತ್ತದೆ(ಚಳಿಗಾಲದಲ್ಲಿ). ಮಾತನ್ನು ಬಳಸಿರುವ ರೀತಿ, ಮೇಲೆ ತೋರುವ ಅರ್ಥದ ಜೊತೆಗೆ ಅನೇಕ ವೇಳೆ ನಮ್ಮ ತೆಕ್ಕೆಗೆ ಒಳಪಡದಷ್ಟು ಅರ್ಥವನ್ನು ಹೊಮ್ಮಿಸಲು ಕೈಗೊಂಡ ವಿಧಾನ - ಇವು ವಿಸ್ಮಯ ಹುಟ್ಟಿಸುತ್ತವೆ. ಕಾವ್ಯವೆಂಬುದು ಪದಗಳೊಂದಿಗೆ ಆಡುವ ಆಟ, ಲೀಲಾವಿನೋದ, ನಿಜ, ಚೀನೀ ಕೈಚಳಕಗಾರ, ಒಂದರ ಹಿಂದೊಂದರಂತೆ ಹಲವಾರು ಚೆಂಡುಗಳನ್ನು ಎಸೆಯುತ್ತ, ಹಿಡಿಯುತ್ತ ಅವುಗಳ ಚಲನೆಯ ಮೂಲಕವೇ ವಿವಿಧ ವೃತ್ತಗಳಿಂದ ಕೂಡಿದ ಚಿತ್ರವಿಚಿತ್ರ ಚಿತ್ತಾರಗಳನ್ನು ರಚಿಸುತ್ತ ಆಟವಾಡುವ ಹಾಗೆ ಈ ಕವಿಯೂ ಮಾತುಗಳನ್ನು ಕುಣಿಸಿದ್ದಾರೆ, ಚಿಮ್ಮಿಸಿದ್ದಾರೆ, ಬಣ್ಣ ಎರಚಿ ಓಕುಳಿ ಮಾಡಿದ್ದಾರೆ. ಕಾವ್ಯದಲ್ಲಿ ಇರಬೇಕಾದ ಇನ್ನೊಂದು ಮುಖ್ಯಗುಣವೆಂದರೆ ನಾಟಕೀಯತೆ, ಕವಿ ಓದುಗನೊಂದಿಗೋ, ಇನ್ನಾವುದೋ ಅದೃಶ್ಯ ವ್ಯಕ್ತಿಯೊಂದಿಗೋ ಸಂಭಾಷಣೆ ನಡೆಸುತ್ತಿರುವಂತೆ ಅನಿಸಿದಾಗ ಅವನ ಕವಿತೆಗೆ ಹೆಚ್ಚಿನ ಆತ್ಮೀಯತೆ ಪ್ರಾಪ್ತವಾಗುತ್ತದೆ. ಇಲ್ಲಿಯ ಕವನಗಳು ಈ ಗುಣದಿಂದಲೂ ಕೂಡಿವೆ.

ರವೀಂದ್ರರ ಕವನಗಳನ್ನು ಸ್ಥೂಲವಾಗಿ ಕೆಲವು ಗುಂಪುಗಳಾಗಿ ವಿಂಗಡಿಸಬಹುದು. 'ನೀ ದುಂಡುಮುಖದ ಬಾಲೆ' 'ಕವಿತ', 'ಐದನೆಯ ಮಾತು' - ಇಂಥ ಕವನಗಳು ಪ್ರೀತಿ, ಬಯಕೆ ಮುಂತಾದವನ್ನು ವೈಯಕ್ತಿಕ ನೆಲೆಯಲ್ಲಿ ಅಭಿವ್ಯಕ್ತಿಸುತ್ತವೆ. ಉತ್ಸಾಹ, ನಿರಾಶೆ, ತಡಕಾಟ, ಕಾಣದ ಯಾವುದರತ್ತಲೋ ತುಡಿತ, ಅದು ಕೈಗೆಟುಕಿಯೂ ಎಟುಕದಿದ್ದಾಗಿನ ಮನಸ್ಸಿನ ಹೊಯ್ದಾಟ, 'ಯಾತ್ರಿಕ'ನಾಗಿ ಕಂಡದ್ದು ಕೇವಲ ಮರೀಚಿಕೆಯೆನಿಸಿದಾಗ ಉಂಟಾಗುವ ವೈಫಲ್ಯದ ನೋವು- ಇವನ್ನೆಲ್ಲ ಇಲ್ಲಿ ಕಾಣಬಹುದು. 'ರಾಜರಸ್ತೆಯ ಕವಲಿನಾಚೆ ಹಾದಿ ತುಂಬ ಜನಜಂಗುಳಿ, ಸಂಜೆಗತ್ತಲ ನೆರಳಿನಲ್ಲಿ ಬಣ್ಣ ಕಳಚಿದ ಓಕುಳಿಯಾಟ, ದಡವಿಲ್ಲದ ಓಟ' 'ವಿಳಾಸವಿಲ್ಲದ ಹುಡುಗಿ'ಗಾಗಿ 'ದಾಪುಗಾಲು ಹಾಕುತ್ತ' ನಡೆಯುವ ಮನ. ಶಿವನ ಉರಿಗಣ್ಣು ಮುಚ್ಚಿದೆಯೆನಿಸಿದರೂ ಹುಡುಗಿಯ ತಿರುಗುನೋಟಕ್ಕೆ ಭಸ್ಮವಾದೇನೆಂಬ ಭಯ. ಇಲ್ಲೆಲ್ಲ ತಾರುಣ್ಯ ಸಹಜವಾದ ಅನುಭವಗಳಿಗೆ ಹೊಸ ಬಗೆಯ ಅಭಿವ್ಯಕ್ತಿ ಪ್ರಾಪ್ತವಾಗಿದೆ. ನೀನು 'ಕವಿತ' 'ನಾನು ಕೊಲಂಬಸ್' ಎನ್ನುತ್ತಾರೆ ಕವಿ. ಏಕಾಗಬಾರದು? ಒಂದು ರೀತಿಯಲ್ಲಿ ಇದು ಕವಿಯ ತೊಳಲಾಟವನ್ನು ಚಿತ್ರಿಸುತ್ತದೆ ಎನಿಸುತ್ತದೆ. ಆದರೆ ಆ ಮಾತಿನ ತೆಕ್ಕೆಗೇ ಸೇರಿಕೊಂಡಂತೆ ಪ್ರಕೃತಿ ಸಹಜವಾದ ಬಯಕೆಯೊಂದು ಬಿಚ್ಚಿಕೊಳ್ಳುತ್ತದೆ : 'ಭಟ್ಟನಾಗುವುದಕ್ಕಿಂತ ತೊಂಡು ಮೇಯುವುದು ಮಜಾ ? 'ಅಲ್ಲವೇ ಕವಿತ ?' ಎಂದು ಕವಿ ಪ್ರಶ್ನೆ ಹಾಕುತ್ತಾರೆ, ಅಲ್ಲವೇ, ಮತ್ತೆ ! ಎಲಾ ಇವರಾ ! ಎಂದು ಹೇಳೋಣ ಎನಿಸುತ್ತದೆ,

ಆದರೆ ಇಷ್ಟಕ್ಕೇ ಸೀಮಿತವಲ್ಲ; ರವೀಂದ್ರರ ಕವಿತೆ. 'ಏನೆಲ್ಲ ಹೇಳಬೇಕೆಂದಿದೆ, ಏನೆಲ್ಲ ತೋರಬೇಕೆಂದಿದೆ,' 'ಒಳಗೆ ನಾ ಮುದುರಿದಾಗ ಗರಿಗೆದರಿ ನೀ ಕರೆವೆ. ನಾನಿಳಿದಷ್ಟು

ನೀನಾಳ. ಸೊನ್ನೆಯಾಗಿರಬೇಕು. ನೀನು ನನಗೆ' ಆದರೆ ಈ ಅನಿಸಿಕೆಗಳನ್ನೆಲ್ಲ ಮಾತಿನಲ್ಲಿ ತೋಡಿಕೊಳ್ಳುವುದು ಹೇಗೆ? 'ಮಾತುಗಳು ಹುಟ್ಟುತ್ತವೆ. ಸಾಯುತ್ತವೆ. ಅರ್ಥವಾಗುವುದಿಲ್ಲ. ಅರ್ಥವಿರುವುದೂ ಇಲ್ಲ. ಮೌನವಾಗಿ ಬಿಡುತ್ತದೆ' - ಎನಿಸಿ ಮನಸ್ಸು ನೋಯುತ್ತದೆ. ಕವಿಗೆ ಈ ಭಾವನೆ ಸಹಜ. ಮಾತಿನಮಲ್ಲ ಕವಿಯಾಗಲಾರ. ಇನ್ನೇನೋ ಆಗಬಹುದು. ನನ್ನ ಮನಸ್ಸಿನಲ್ಲಿರುವದನ್ನು ಹೇಳಲು ಈ ಮಾತುಗಳು ಸಾಧ್ಯವಾಗುತ್ತಿಲ್ಲವಲ್ಲ ಎನಿಸುತ್ತಿರಬೇಕು ಕವಿಗೆ. ಅವನು ಮಾತುಗಳೊಂದಿಗೆ ಆಟವಾಡುವಂತೆಯೇ ಅವುಗಳಿಂದ ತನಗೆ ಬೇಕಾದ ಅರ್ಥ ಹೊಮ್ಮಿಸಲು ಹೆಣಗುತ್ತಿರುತ್ತಾನೆ. (ಆ ಶಕ್ತಿ ಇರಬಹುದೇ ನೋಡಿ) ಆಸಕ್ತಿ ಇಲ್ಲವಲ್ಲಾ ಎಂದು ಅನೇಕ ವೇಳೆ ಒಳಗೊಳಗೇ ನೋಡುತ್ತಾನೆ. ಇದು ಒಂದು ಬಗೆಯ ಮಧುರ ವೇದನೆ. ಹಲವು ವೇಳೆ ಮಾತುಗಳ ನಡುವಣ ಮೌನವೇ ಅರ್ಥಗರ್ಭಿತವಾಗಿ ಬಿಡುತ್ತದೆ. ಕವಿತೆ ಸಾರ್ಥಕವಾಗುವುದು ಇಂಥ ಸಂದರ್ಭದಲ್ಲಿ.

ಕವಿ ರವೀಂದ್ರರು (ಬಂಗಾಲ ಕವಿಯಲ್ಲ, ಕನ್ನಡದ ಈ ಕವಿ) ಲೋಕದ ಪ್ರಚಲಿತ ವಿದ್ಯಾಮಾನಗಳಿಗೂ ಕಣ್ಣು ತೆರೆದುಕೊಂಡಿದ್ದಾರೆ. 'ಸಿಂಧುವಿನಲ್ಲೀಗ ಹುಚ್ಚು ಪ್ರವಾಹ' ಎಂದು ಕವಿಯ ಮನಸ್ಸು ತುಡಿಯುತ್ತದೆ. 'ಭೋರಿಡುವ ಪ್ರವಾಹಕ್ಕೆ ಕಡಿವಾಣವಿಕ್ಕಿ ಈ ನೆಲವ ಮತ್ತೆ ಬಿತ್ತಿ ನಾವು ಬೆಳೆಯಲೇಬೇಕು' ಎಂದು ಕವಿ ಸಂಕಲ್ಪಿಸುತ್ತಾರೆ. ಪ್ರವಾಹಕ್ಕೆ ಕಡಿವಾಣವಿಕ್ಕುವ ಬದಲು ಅಂಗೈಯಿಂದ ತಡೆ ಒಡ್ಡಿದರೆ ಅದು ಹದ್ದುಬಸ್ತಿಗೆ ಒಳಪಡುವುದೇನೋ. ಅದು ಇನ್ನೂ ಸಾಧಿಸಬೇಕಾಗಿದೆ. ೧೯೭೫ ರ ಜೂನ್ ತಿಂಗಳಲ್ಲಿ ಬರೆದ ಈ ಕವನದ ಹಿನ್ನೆಲೆಯನ್ನು ಊಹಿಸಿಕೊಳ್ಳಬಹುದು.

ಜರ್ಮನಿಯಲ್ಲಿ ಹಲವಾರು ಮನೆ - ಮನಗಳನ್ನು ಬೇರ್ಪಡಿಸಿದ್ದ ಬರ್ಲಿನ್ ಗೋಡೆನ್ನುರುಳಿಸಿ, ಅದರ ಚೂರುಗಳನ್ನು ನೆನಪಿಗಾಗಿ ಇಟ್ಟುಕೊಳ್ಳ ಬಯಸುವವರಿಗೆ ಮಾರಾಟ ಮಾಡುತ್ತಿದ್ದ ಸಂದರ್ಭದಲ್ಲಿ ಬರೆದ ಕವನ ತನ್ನ ಪರಿಧಿಯಿಂದಾಚೆಗೂ ಕೈ ಚಾಚಲು ಹವಣಿಸುತ್ತಿದೆ. ಹಳೆಯ ಗೋಡೆ ಉರುಳಿದರೂ ಹೊಸ ಹೊಸ ಗೋಡೆಗಳೇಳುತ್ತಿರುವುದನ್ನು ಕಂಡು ಖಿನ್ನವಾದ ಮನಸ್ಸಿಗೆ ಇಲ್ಲಿ ಕನ್ನಡಿ ಹಿಡಿದಿದೆ. 'ಇರುವುದೊಂದೇ ಭುವಿಯಲಿ ಬರಿಯ ಗೋಡೆಗಳೇನು ? ಸಾಕಿನ್ನು ಇವರ ಗೊಡವೆ' ಗೋಡೆಗಳನ್ನು ನೆಲಸಮ ಮಾಡಿ ಹೂ ಅರಳಿಸುವ ಹಂಬಲ ಇಲ್ಲಿ ಬಿಂಬಿತವಾಗಿದೆ, ಆದರೆ ಇದೂ ಬರೀ ಕನಸೇ ಆದೀತೇನೋ. ವ್ಯವಹಾರದ ಮುಂದೆ ಆದರ್ಶಗಳು ಉಳಿಯುತ್ತದೆಯೆ ?

ಪ್ರಚಲಿತ ವಿದ್ಯಮಾನಗಳಿಗೆ ಸ್ಪಂದಿಸಿರುವ ಕವನಗಳು ಇಲ್ಲಿ ಇನ್ನೂ ಹಲವಾರಿವೆ. 'ಮೇಧಾ ಮಣಿಬೇಲಿ' ಇಂಥದೊಂದು ಕವನ. ರವೀಂದ್ರರ ಲೇಖನಿ ಇಲ್ಲಿ ಪ್ರಬಲವಾಗುತ್ತದೆ. 'ಮಣಿಬೇಲಿಯಲ್ಲಿ ನಂದಿದ ಕಂದೀಲು ಮಹಲು ಮನೆಗಳಲ್ಲಿ ಮಿಂಚುಗೊಂಚಲು, ಮಂಗಳಾಂಗಿಯರ ಕೆನ್ನೆಯಲ್ಲಿ ಕೋಲ್ಮಿಂಚು' ನರ್ಮದಾ ಅಣೆಗಟ್ಟಿನ ಪ್ರಗತಿಯ ಚಿತ್ರದ ಎದುರು ಮಣಿಬೇಲಿ ಎಂಬ ಹಳ್ಳಿಯ ಮುಳುಗಡೆಯ ಗೋಳು, ಅದರ ಗೋರಿಯ ಮೇಲೆ ಸಂಪತ್ತಿನ ಸೌಧ. 'ಎರಡು ಅಕ್ಟೋಬರ್', 'ಎತ್ತರಕೆ ಬೆಳೆದವನು', 'ಮಗನ ಕನಸು', 'ಬಾಹುಬಲಿಯ ಮುಂದೆ ' ಇವೆಲ್ಲ ಸಾರ್ಥಕ ಕವನಗಳು. ಈ ಸಂಕಲನಕ್ಕೆ ತನ್ನ ಹೆಸರನ್ನೆ ದಾನಮಾಡಿರುವ 'ಶೂನ್ಯವಲ್ಲದೆ ಬೇರೆ' ಎಂಬ ಕವನ ಹಲವು ಸ್ತರಗಳಲ್ಲಿ ಅರ್ಥ ಹೊಮ್ಮಿಸುತ್ತದೆ. ಒಂದು ರೀತಿಯಲ್ಲಿ ಇದು ಐತಿಹಾಸಿಕ ಮಹಾ ದುರ್ಘಟನೆಯೊಂದಕ್ಕೆ ಕವಿಯ ಪ್ರತಿಕ್ರಿಯೆ. ಆದರೆ ಇದನ್ನೂ ಮೀರಿ, ಒಂದು ಕಡೆ ವೈಯಕ್ತಿಕ ನೆಲಗಟ್ಟಿನಲ್ಲೂ ಇನ್ನೊಂದು ಕಡೆ ಸಾರ್ವತ್ರಿಕತೆಯ ಹಿನ್ನೆಲೆಯಲ್ಲೂ ಇದು ವರ್ಣನಾತೀತವಾದ ವಿಷಾದದ

ಹೊಸಿಲನ್ನು ಹರಿಯುತ್ತದೆ. ರಾಜಕಾರಣದ ಮಹಾ ಸಾಧನೆಯೊಂದನ್ನು ದಾಖಲಿಸುತ್ತಾ ಜೊತೆಜೊತೆಗೇ ಅದರ ಇನ್ನೊಂದು ಮಗ್ಗುಲಾದ ವಿಫಲತೆಯ ಅನುಭವವನ್ನೂ ಸೂಚಿಸುತ್ತ ಸಾಗುತ್ತದೆ. ಕವನ ಕೊನೆಗೊಳ್ಳುವುದು ಹೀಗೆ :

ಇತಿಹಾಸದ ಗರ್ಭ ಸೀಳಿ ನೀ
ಚಿಮ್ಮಿ ಬರಬಹುದು ಹರಿವ
ಕಣ್ಣೀರ ತೊಳೆಯಬಹುದು
ಹೇಳು ಗೆಳತಿ ಎಂಥ ಸ್ಮಾರಕ ನಿನಗೆ
ನೀ ಸೃಜಿಸಿದ ಶೂನ್ಯವಲ್ಲದೆ ಬೇರೆ

ಹೀಗೆ ಒಮ್ಮೆಲೇ ಮಹಾ ಅನರ್ಥದ ಚಿತ್ರವೊಂದು ಸ್ಫೋಟಿಸುತ್ತದೆ, ವೈಯಕ್ತಿಕ ನೆಲೆಯಲ್ಲೂ ಇದು ಹೇಳಲಾಗದ ದುಃಖದ ಕಡಲನ್ನು ಉಕ್ಕಿಸುತ್ತದೆ.

ಇಲ್ಲಿರುವ ಕವನಗಳೆಲ್ಲ ಗಂಭೀರವಾದುದೆಂದು ತಿಳಿಯಬಾರದು ಕಾಮ, ನೋವು, ವಿನೋದ, ವಿಷಾದ, ವ್ಯಂಗ್ಯ, ಹಾಸ್ಯ - ಎಲ್ಲವೂ ಇಲ್ಲಿ ತೊಂಗಲಾಗಿದೆ. 'ಮಗನ ಕನಸಿ'ನ ತಿಳಿಹಾಸ್ಯ, ಅದರ ಹಿಂದೆ ಎತ್ತಿದ ಕೊಂಡಿಯ ಕುಟುಕು - ಇವನ್ನು ಗಮನಿಸಬೇಕು. ಪ್ರೀತಿ, ಹಾಸ್ಯ, ವ್ಯಂಗ್ಯ, ಚಮತ್ಕಾರಗಳೇ ತುಂಬಿ ತುಳುಕುವ ಚುಟುಕಗಳೂ ಇಲ್ಲಿ ಹಲವಾರಿವೆ. 'ಹವಾಲ ತಿಣುಕುಗಳ' ಚುಚ್ಚುಹಾಸ್ಯದಿಂದ ರಾಜಕಾರಣಿಗಳ ದಪ್ಪ ಚರ್ಮಕ್ಕೆ ಏನೂ ಆಗದಿದ್ದರೂ, 'ಏಡ್ಸ್'ಗೆ ಒಂದೇ ಸವಾಲು - ಹವಾಲ ' ಎಂಬ ಮಾತು ಇದು ಎಂಥ ಭಯಂಕರ ಪಿಡುಗು ಎಂಬುದನ್ನು ಸೂಚಿಸುತ್ತದೆ. ಕವಿಯ ಹಾಸ್ಯಪ್ರಜ್ಞೆಯ ತುಣುಕು ಸವಿಯಬೇಕಿದ್ದರೆ ಈ ಚುಟುಕವನ್ನು ನೋಡಿ : -

ಹ್ಞೂ ಎಂದಿದ್ದರೆ
ನಾನೇ ಕೊಟ್ಟು ಬಿಡುತ್ತಿದ್ದೆನಲ್ಲಾ.
ನೀನೇಕೆ ಕದ್ದೆ ನನ್ನ ಹೃದಯವನ್ನು ?
ಹೋಗಲಿ,
ನಿನ್ನದನ್ನಾದರೂ ಕೊಟ್ಟುಬಿಡು,
ಸುಮ್ಮನೇಕೆ ಬಿಟ್ಟಿರುವೆ
ಖಾಲಿ ಜಾಗವನ್ನು ?

ಬೆಂ ಶ್ರೀ ರವೀಂದ್ರರ ಈ ಕವನ ಸಂಕಲನದ ಎಲ್ಲ ರಸಸ್ಥಾನಗಳನ್ನೂ ಇಲ್ಲಿ ಪಟ್ಟಿಮಾಡಿಕೊಡುವುದು ನನ್ನ ಉದ್ದೇಶವಲ್ಲ . ಇದು ಒಂದು ಒಳ್ಳೆಯ ಕವನಸಂಕಲನ, ಹೊಸತನದ ಸಂತೋಷವನ್ನು ಅನುಭವಿಸುವವರೆಲ್ಲ ಸವಿಯಬೇಕಾದ್ದು - ಎಂಬುದನ್ನು ಸ್ಥಾಪಿಸುವ ಸಲುವಾಗಿ ಇಷ್ಟೆಲ್ಲಾ ಬರೆದಿದ್ದೇನೆ. 'ಮೂಗಿಗಿಂತ ಮೂಗುತಿ ಭಾರ' ಎನ್ನುವಂತೆ ಆಗಬಾರದೆಂಬುದನ್ನು ನಾನು ಬಲ್ಲೆ. ಕವನಸಂಕಲನ ಪುಟ್ಟದಾದರೂ ಇದರ ಮಹತ್ವ ಈ ಪುಸ್ತಕದ ಪುಟ ಸಂಖ್ಯೆಗಿಂತ ಹೆಚ್ಚಿನದು. ಈ ಕೃತಿಗೆ ಒಳ್ಳೆಯ ಸ್ವಾಗತ ದೊರಕುವುದಾದರೆ ನನಗೆ ಸಂತೋಷ. ಈ ಕವಿ ಇನ್ನು ಮುಂದೆಯೂ ಒಳ್ಳೆಯ ಕವನಗಳನ್ನು ಪೂರೈಸುತ್ತಿರಲಿ - ಎಂದು ಹಾರೈಸುತ್ತೇನೆ.

ಮೈಸೂರು
ಏಪ್ರಿಲ್ ೨೦, ೧೯೯೭

ಎಚ್ಚೆಸ್ಕೆ

ಒಂದ್ನಿಮಿಷ ....

ಅಪ್ಪನ ಮನೆಯಿಂದ ಹೊರಬರಲು, ನಲವತ್ತರ ಅಂಚಿನಷ್ಟು ಬರುವ ಬಾಳೀಗೆಗೆ ಕಾಯುತ್ತಿತ್ತೇನೋ ನನ್ನ ಕವನಗಳು. ಬಾಲ್ಯ, ಯೌವ್ವನದ ಹಾದಿಯಲ್ಲಿ ಸ್ಪರ್ಶಿಸಿದ, ಘರ್ಷಿಸಿದ ಭಾವ ವಿಚಾರಗಳನ್ನು ಆಗೀಗ ನುಡಿಕಟ್ಟಿನಲ್ಲಿ ಹೆಣೆದಿದ್ದೆ ಈ ಗಂಟು.

ಕವನಗಳು ಜಗಿದ ಸಂದರ್ಭ, ಅವನ್ನು ರೂಪಿಸಿದ ನೋವು, ನಲಿವು, ಕಾಳಜಿ ಸನ್ನಿವೇಶ, ವ್ಯಕ್ತಿಗಳು ನನಗೆ ಆಪ್ತರು. ನನ್ನ ಮನದಂಗಣದಲ್ಲಿ ಸದಾ ಹಸಿರು. ಈ ಚೆಲ್ಲಾಟ ಮುದಕೊಟ್ಟಿದೆ.

ಕಾಲೇಜಿನಲ್ಲಿ ಓದುವಾಗ ಕವನ ತಿದ್ದಿದವ ಗೆಳೆಯ ಅನಂತಪದ್ಮನಾಭ, ಬ್ಯಾಂಕಿನ ಮಿತ್ರರು, ವಿಶೇಷವಾಗಿ ಚಂದ್ರಶೇಖರರ ಪ್ರೋತ್ಸಾಹ ಸಂಕಲನ ಸಾಕಾರವಾಗಲು ಕಾರಣ.

ಮೊದಲ ಕವನ ಸಂಕಲನವೆಂದು ನೀವು ಮೆದುವಾಗಬೇಕಿಲ್ಲ. ಟೀಕೆಗಳು ಬರಲಿ, ಬೆನ್ನು ತಟ್ಟಲಿ. ಭೇಷಾದರೂ ಆದೀತು; ಬಾಸುಂಡೆಯಾದರೂ ಆದೀತು.

ಸತತ ಕ್ರಿಯಾಶೀಲತೆಯ ಮೂರ್ತಿ, ಚಿರಯೌವ್ವನಿಗ ಪ್ರಾಚಾರ್ಯ ಎಚ್ಚೆಸ್ಕೆ ಮುನ್ನುಡಿಯ ಮೂಲಕ ಆಶೀರ್ವದಿಸಿದ್ದಾರೆ.

'ಶೂನ್ಯವಲ್ಲದೆ ಬೇರೆ' ಗೆ ಮುಖ ಮೂಡಿಸಿದ್ದಾರೆ ಗೆಳೆಯ ಸುದರ್ಶನ. ಅಂದವಾಗಿ ಮುದ್ರಿಸಿದವರು ಗೆಳೆಯ ನಾಗರಾಜ್.

ಇವರುಗಳಿಗೆ ನಾನು ಕೃತಜ್ಞ.

ಕವನ ಸಂಕಲನ ಪ್ರಕಾಶಿಸಿದ "ಸಮನ್ವಯ ಸಮಿತಿ" (ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು) ಇವರಿಗೆ ನಾನು ಋಣಿ.

ನೀವು ಸ್ವಾಗತಿಸುತ್ತೀರಿ, ಹರಸುತ್ತೀರಿ ಎಂಬ ನಂಬಿಕೆ ನನ್ನದು.

೨೬, ಜುಲೈ ೧೯೯೭
ಬೆಂಗಳೂರು

ಬೆಂ ಶ್ರೀ ರವೀಂದ್ರ

ಕವನ ಮಾಲೆ

ನೀ ದುಂಡುಮುಖದ ಬಾಲೆ

ರಾಜರಸ್ತೆಯ ಕವಲಿನಾಚೆ
ಹಾದಿ ತುಂಬ ಜನ ಜಂಗುಳಿ
ಸಂಜೆಗತ್ತಲ ನೆರಳಿನಲಿ
ಬಣ್ಣ ಕಳಚಿದ ಓಕುಳಿಯಾಟ
ದಡವಿಲ್ಲದ ಓಟ

ಬೆಸೆದ ಮಿಂಚು ನೋಟಕೆ
ಎಸೆದೆ ಕೋಟಿ ವರುಷದ ಜ್ವಾಲೆ
ಓಹ್ ....
ನೀ ದುಂಡುಮುಖದ ಬಾಲೆ

ದಿಗ್ಗನೆದ್ದಿತು ಬೆಳಕಿನುಬ್ಬರ
ಕರಗಿ ಹೊಯ್ತು ತಂತಿ
ಅಪ್ಪಿ ನಿಂತಿತು ಕತ್ತಲೆ
ದಿಕ್ಕು ದಿಕ್ಕಲಿ ಚೆಲ್ಲಾಪಿಲ್ಲಿ
ಪೋಣಿಸಿದ ಮುತ್ತುಮಣಿ
ಬ್ರಹ್ಮನೇಯ್ದ ಬಟ್ಟೆ ಜಾಳು ಬೀಳಾಗಿ
ಬಯಲಾಯ್ತು ಹೊನ್ನ ತೇರು
ಸೀತೆಗಾಗಿ ಬಾಯ್ಬಿಟ್ಟ ಭುವಿ
ಈಗೇಕೆ ನಿಶ್ಚಲವಾಯ್ತು

ಏನು ಆಟವಿದು
ಎಂತು ಮಾರನ ಮಾಟ
ಮುಚ್ಚಿದೆ ಶಿವನ ಉರಿಗಣ್ಣು
ಘಂಟೆಯ ಸದ್ದು
ಮಾತಿನ ಮದ್ದು
ನೆಲ ಹಿಡಿಯದ ಸಹಸ್ರ ಗಿಣ್ಣು

ಬೇರು ಬಿಟ್ಟು ಮೈದಾಳಿ ನಿಂತೆ
ಸೂರ ಸೊಡರಿಗಾಗಿ
ಸೂರೆಯಾಗಿ ಹಳೆ ಕಥೆಯ ಸಾರಿ
ಬರಿದಾಗಿ ಬಾಗಿಲಲ್ಲಿ

ಪೊರೆ ಕಳಚಿ ಹಾವು
ಹೊಸದಾಹ ಹೊತ್ತು
ಮತ್ತೆ ಮತ್ತೆ ಬರುತಿದೆ
ಕಪ್ಪೆ ವಟರು ಅಡಗಿದೆ
ವಟವೃಕ್ಷದ ಹೊಟ್ಟೆಯಲಿ
ಗೆದ್ದಲು ಗೂಡು ಕಟ್ಟಿದೆ

ಮೊಗ್ಗು ಬಿರಿವಾಗ
ಹೂ ಮಂಚಕ್ಕೆ ಹತ್ತಿತು ದಾವಾಗ್ನಿ
ಚಂದ್ರ ತಾರೆಯರ ಸಹಗಮನ
ಚಟ್ಟದ ಚಟಪಟದಲಿ ಅರಳಿ ನಿಂತೆ
ಬೆಂಕಿಯ ಮಗಳೇ,
ಮಿಗಿಲಲ್ಲವೇ ನೀನು
ಭುವಿಯ ಬಾಲೆಗಿಂತ
ಭರಭರನೆ ತಿರುಗಿ
ರೆಂಬೆ ಕೊಂಬೆಗಳ ಬಾಗಿಸಿ
ಗಾಳಿಯಾಗಿ ಹೋದೆ
ನಿನ್ನ ಗುರುತೆಲ್ಲಿ

ವಿಳಾಸವಿಲ್ಲದ ಹುಡುಗಿ
ದಾಪುಗಾಲು ಹಾಕುತ್ತ ಹೊರ ನಡೆದೆ ನಾನು
ನಿನ್ನೆಡೆಗೆ ಸೆಳೆಯುತ್ತಿತ್ತು ಮನ
ನೀ ತಿರುಗಿ ನೋಡಿದೆ ಏನು
ಭಸ್ಮ ಮಾಡದೆ ಬಿಡುವೆಯೇನು

ಕವಿತ

ನೀನು ಕವಿತ: ನಾನು ಕೊಲಂಬಸ್

ಕಾಣದ ಖಂಡಗಳಲಿ ಚಿನ್ನ
ಢೋಲು ಢಕ್ಕೆಯ ಬತ್ತಲೆ ನರ್ತನ
ವಿಷದ ಬತ್ತಳಿಕೆ

ವ್ಯಷ್ಠಿ ಸಮಷ್ಠಿಯಲಿ
ಚೈತ್ರಗಾನ ; ಪರಪುಟ್ಟ
ಮಜಲು ಮಜಲುಗಳಲಿ
ಪಾತಾಳಗರಡಿ

ಪಾಂಚಾಲಿ
ಯಕ್ಷ
ಯ ಪಾತ್ರೆ ನಿನ್ನ ಪಟ್ಟು
ನಾ ಚಿತ್ತು

ಕವಿತ
ಕೂಡಿ ಕಳೆದರೆ ಸೊನ್ನೆ
ಬಾರದ ಲೆಕ್ಕ
ಹಾಲುತುಪ್ಪ ಬೆರಣಿವಿಭೂತಿ

ಭಟ್ಟನಾಗುವುದಕ್ಕಿಂತ
ತೊಂಡು ಮೇಯುವುದು ಮಜಾ
ಅಲ್ಲವೇ ಕವಿತ

ಯಾತ್ರಿಕ

ಭೋರಿಡುವ ಬಿಸಿಗಾಳಿ
ದಿಕ್ಕು ಬದಲಿಸುವ ಹಾದಿ
ಗುರುತು ಮೂಡದ ಹೆಜ್ಜೆ

ಇಲ್ಲೇ ..... ಎಲ್ಲೋ ....
ರಸಭರಿತ ಖರ್ಜೂರ; ಬಾಯಾರಿಪ ತಣ್ಣೀರು
ನಕ್ಕು ನಗಿಸುವ ಜಾತ್ರೆ ಜನ ಇಹುದಂತೆ
ಕಾಲು ಅರಳಾಗುವ ಮರಳ
ಬಚ್ಚಿಡುವಂಥ ನೆರಳತೆರೆ ಇಹುದಂತೆ
ಜಾರು ಮಾತನು ನಂಬಿ
ಕಾಲು ಸೋಲುವ ಹಾದಿ
ಇನಿತಿನಿತಿಗೂ ತಿರುವು
ಮಾರ್ಗದರ್ಶಕರು ಕೆಲರು

ನೀಲಿಯಾಕಾಶಕ್ಕೆ ಮೂತಿಯನಿಟ್ಟ ಒಂಟೆ
ಡುಬ್ಬದ ಮೇಲೆ ಕುಂತವನೊಬ್ಬ ಅಂದ
ಎತ್ತ ಕಡೆಯೋ ಯಾತ್ರಿಕ? ಹೊತ್ತ ಚೀಲದಲೇನು?
ಏನಿದ್ದರೇನು ನನ್ನ ಬೆನ್ನಿನ ಮೇಲೆ
ಕಡೆಗೆ ಕಡೆಯುತ ನಡೆ ನಡೆ

ಆರಿದ ಬಾಯಿ; ಸೋತ ಕೈಕಾಲು
ಓಹೋ ಏನಲ್ಲಿ
ತುಂಬಿತೂಗುವ ಗಂಗೆ
ಕೋಲೆ ಬಸವನಂತೆ ಬಾಲಬಡುಕನಾಗಿ
ಉಬ್ಬುಬ್ಬಿ ಕಣ್ಣು ನೆಟ್ಟಲ್ಲಿ
ಕಂಡಿದ್ದು ಮರೀಚಿಕೆ.

ಬಾಹುಬಲಿಯ ಮುಂದೆ

ತುಟಿಯಂಚಲಿ ಸುಳಿನಗೆ
ಸಂತೃಪ್ತ ಮುಖಭಾವ
ನೀಳನಾಸಿಕ ಹರವಿದೆದೆ
[illegible]ನಡು ತುಂಬುಬಾಹು
ಸೆಳೆವ ವ್ಯಕ್ತಿತ್ವ

ರಾಜ್ಯ ಕೋಶ ಲಲನೆಯರು ಸುತ್ತ
ಮುತ್ತಿದ್ದರೂ ಬತ್ತಲಾದ
ನಿನ್ನ ಧೈರ್ಯಕ್ಕೆ ದಿಗಿಲಾಗುತ್ತದೆ

ಸತ್ತ ಸಾವಿರ ವರುಷ; ನಿತ್ಯಸಾಕ್ಷಿ
ಸತ್ಯಕ್ಕೆ ಹುಡುಕಾಟ: ತರತರಹದ ಹೂಟ
ರಾತ್ರಿ ಬೆಳಗಿನ ಗಿರಗಿಟ್ಟಲೆ ತಾಕಲಾಟ
ವಂಚನೆ ಸುಲಿಗೆ ರಕ್ತಪಾತ
ಕಾವ್ಯ ಧ್ಯಾನ ಆನಂದ ಆವೇಶ
ಹಾಗಿದ್ದರಲ್ಲವೇ ರುಚಿ

ಗಿರಿಗಳಲಿ ಇಂದ್ರ-ಚಂದ್ರರು
ರಸಿಕಜನ ಮಂದಾರರು
ಮೋಹಕತೆಯ ಆರಾಧಕರು
ಸಂಗ್ರಹ ಸಂತೋಷ ಸಾಧಕರು
ಈ ತಾಣದಲಿ
ನೀ ಬತ್ತಲೆ ಭೈರಾಗಿ

ನನ್ನವರು ಕೂಪ ಮಂಡೂಕಗಳು
ತುಣುಕು ಮುತ್ತುವ ಕಾಗೆಗಳು

ಹೊದೆಯುತ್ತ ಹೋಗುತ್ತಾರೆ.
ನಾವೆಲ್ಲಾ ನಿನ್ನಂತಾದರೂ (ಹಾಗಾಗಲಾರದು)
ಗಂಟು ಕಗ್ಗಂಟು ಬಿಗಿಯುತ್ತದೆ
ಯಾರು ಬಿಚ್ಚುತ್ತಾರೆ

ಅದಕೆ ಅನಿಸುತ್ತಿದೆ
ನಿನಗಿಂತ ಎತ್ತರ ಅಳಲೆಕಾಯಿ ಅಜ್ಜಿ ಎಂದು
ಕೆಂಪು ಹೆಂಚುಗಳ ಕೊರಕಲು ಓಣಿಗಳ
ಬೆಳಗೊಳಕ್ಕೆ ಹೋಗೋಣವೆಂದು

ತಂಟೆಕೋರ

ಇವ ಮಹಾ ತಂಟೆಕೋರ
ಎಲ್ಲೆಲ್ಲೂ ಅವಿತಿದ್ದಾನೆ

ನನ್ನ ಯೋಜನೆಗಳನೆಲ್ಲ
ತಿರುವು ಮುರುವು ಮಾಡಿ
ಪಲ್ಟಿ-ಲಾಗ ಹಾಕಿ ನಗುತ್ತಾನೆ

ಹರಿದು ಸಂಪ್ರದಾಯದ ಬಸಿರು
ಭಾವಗಳಲಿ ಮೂಡುತ್ತಾನೆ
ಸುತ್ತಲ ಸೆಳೆತಕ್ಕೆ ತೆಕ್ಕೆ ಬೀಳುತ್ತಾನೆ
ಬೇರುಬಿಟ್ಟು
ಬಯಕೆ ಭೂತಾಕಾರವಾಗಿ ಬೆಳೆಸುತ್ತಾನೆ
ರಂಗುರಂಗಿನ ಹಕ್ಕಿಗಳನು ಪಂಜರದಿಂದ ಬಿಡುತ್ತ
ಸುರುಳಿ ಸುರುಳಿಯಾಗಿ ಸಮಸ್ಯೆಗಳ ಗಂಟು ಬಿಚ್ಚುತ್ತಾನೆ

ಗುಲಾಬಿ ತೋಟದಲಿ ಝೇಂಕರಿಸುತ್ತ
ಕೊಂಪೆಯಲಿ ಕೋಪದಿಂದ ಗಿರಗಿರಿಸುತ್ತ
ನಕ್ಕು - ಅಳುತ್ತಾನೆ.
ಮಂಕುಹಿಡಿಸಿ ಮಾಂತ್ರಿಕತೆಯಲಿ ಬಂದಿಸುತ್ತಾನೆ

ಆಕಾರವಾಗಿ ನಿರಾಕಾರವಾಗಿ
ನಿರ್ವಿಕಾರವಾಗಿ ನಿರಾಳತೆಯ
ಕತ್ತು ಹಿಸುಕುತ್ತ ಆಟವಾಡುತ್ತಾನೆ

ತಳಮಳಿಸಿ ಮೂಟೆಕಟ್ಟಿ
ಹಿಂದೂ ಸಾಗರದಲ್ಲಿ ಮುಳುಗಿಸಿ
ಬಿಡಬೇಕು ಇವನ
ಆದರೆ ಇವ
ಸತ್ತರೆ ನಾನಾಗುತ್ತೇನೆ ಶವ
ಗದಗುಟ್ಟುತ್ತದೆ ಜೀವ

ಐದನೆಯ ಮಾತು

ಏಯ್ ಹುಡುಗಿ
ಬರೆಯುವುದಿಲ್ಲ ನಿನ್ನ ಬಗ್ಗೆ ಕವಿತ
ಋಷಿ ಹತ್ತಿದ್ದಕ್ಕೆ ಹೇಳುತ್ತೇನೆ
ಒಂದೈದು ಮಾತು

ಒಂದು : ನಮ್ಮಿಬ್ಬರ ನಡುವೆ ಪ್ರೇಮ ಇರೋದಾದ್ರೆ
ಅದು ಅಮರವಲ್ಲ, ಅದ್ವಿತೀಯವೂ ಅಲ್ಲ
ಮೂರ್ಖ ರೋಮಿಯೋ ಜೂಲಿಯಟ್ಟರಿಗೆ
ಲೈಲಾ ಮಜನೂಗಳಿಗೆ ನಮ್ಮ ಹೋಲಿಕೆ ಇಲ್ಲ
ಸತ್ಯದ ಬಣ್ಣ ಕಪ್ಪು ಗೆಳತಿ
ಮೂಗೆಳೆಯ ಬೇಡ

ಎರಡು : ನೀ ಸೀತೆ ಸಾವಿತ್ರಿಯಾಗಬೇಕಿಲ್ಲ
ತಾಳಿ ಮೋಕ್ಷಕ್ಕೆ ಹಾದಿಯಲ್ಲ
ಎಣ್ಣೆ-ನೀರು ಕಡೆದಂತೆ ಸರ್ಕಸ್ಸು
ಮಾಡಬೇಕಿಲ್ಲ ಮಜವಾಗಿರೋಣ
ಬೇಡವೆಂದರೆ ಬೇರೆದಾರಿ ಗುರುತಿಸಿಕೊಳ್ಳೋಣ

ಮೂರು : ಗೊಣಗುವುದು ಬೇಡ
ನಾನೇ ಕಾಫೀ ಮಾಡುತ್ತೇನೆ
ತಿರುಗೋಣ ಜೊತೆಯಾಗಿ
ಹೊರಗಿನಗಾಳಿ ಬೀಸಲಿ ನಮ್ಮ ಮೇಲಷ್ಟು

ನಾಕು : ಹೀಗಂದಿದ್ದಕ್ಕೆ ಸ್ತ್ರೀ
ವಿಮೋಚಕ ಎಂಬ ಕುಹಕ ಬೇಡ
ನಿನ್ನ ಸೆಳೆತಕೆ ನನ್ನ ಭಾವಕೆ
ಪ್ರಕೃತಿಯ ಈ ಕರಾಮತ್ತಿಗೆ
ಬೆರಗಾಗಿದ್ದೇನೆ ಗೊತ್ತಾ!
ಮತ್ತು
ಐದನೆಯ ಮಾತು !
ಮರೆತಿದ್ದೆ ನಲ್ಲೇ !!

ಕೇಂದ್ರ-ಸುತ್ತು

ಏನೆಲ್ಲ ಹೇಳಬೇಕೆಂದಿದೆ
ಏನೆಲ್ಲ ತೋರಬೇಕೆಂದಿದೆ

ನಿನ್ನ ನಗೆಮೊನೆಯು
ಎನ್ನ ಚಿಮ್ಮಿಸಿ
ಕಿರಿದಾಗಿದೆ ದಿನವು
ಸುತ್ತುವ ಜಾಡ ಹಿಗ್ಗಿಸಿ
ಹಿರಿದಾಗಿದೆ ಮನವು

ಸುತ್ತುತ್ತ ಸುತ್ತುತ್ತ
ಅರಿವಾದೀತು ನಿನಗೆ ಕಣಕಣವು

ಆರ್ಟ್‌ಗ್ಯಾಲರಿಯಲಿ ;
ಮೊದಲು ಕಂಡಂದಿನಿಂದ ಮಥಿಸಿದ ಮಾಲುಗಳು
ಬಿಳುಪು ಹಳದಿ ಹೊಂಬಣ್ಣ ಕೆಂಪು
(ಹೊರಕೋಣೆಯಲಿ ಕಪ್ಪು ಕಾವಿ)
ಹಳತು-ಹೊಸತು ತೈಲ-ಜಲವರ್ಣ

ಹರಕು-ಮುರುಕು ವಡ್ಡು ವಡ್ಡು
ಇತ್ತ ಈ ಕುಸುರಿ ಹೇಗಿದೆ ನೋಡು
ಕಾಲಸರಿದಂತೆ ಒಪ್ಪವಾಗುತ್ತ
ಒಗಟಾದ ಈ ಭಾವ ನಿನ್ನದು

ಜೂಗಾರ್ಡನಿನಲಿ ;

ಕುಣಿಯುತಿದೆ ಸತ್ತ ಸ್ವಾತಂತ್ರ್ಯದಲಿ
ಕಾಡುಮಾನವ ಪಂಜರದಲಿ
ನುಸುಳುವ ನಾಗ ಮತ್ತೊಂದರಲಿ
ನಾಟ್ಯ ಮಯೂರನ ಲಾಸ್ಯ

ವಸಂತ ವಯ್ಯಾರಿಯ ಪುಲಕ
ಕೇಳಿಸಿದೆಯೇನೋ ಸಿಂಹರಾಜನಿಗೆ
ಚಿಗರೆಯ ಕೂಗು
ನಿನಗೋ ಚಿನ್ನಾಟವಾಡುವ ಸೊಬಗು

ಮ್ಯೂಸಿಯಂನಲಿ :
ಮಧುರ ನೆನಪುಗಳ ಸತ್ತ್ರವಸ್ತುಗಳ ಕೂಟ
ಜಿಂಕೆ ಕೊಂಬು ಹುಲಿಚರ್ಮ ಕಲ್ಲು
ವಿಗ್ರಹ ಕಂಚು ಹಿತ್ತಾಳೆ ತಾಮ್ರ
ಕಿರೀಟಗಳ ತಾಕಲಾಟ
ಬತ್ತಲೆ ಹೊಟ್ಟೆಯ ನರ್ತನ
ಉತ್ಸವ ಸಮಾರಾಧನೆ

ಹೊರಗೆ
ಗಂಗಾತೀರ ನೂರು ಗಾವುದ ದೂರ
ಕಾಡುಮೇಡಿನ ಹಾದಿ
ಶುಭ್ರ ಅಕಾಶದಲಿ ನೂರಾರು ಮಿಣುಕು
ತೆರೆಯೇಳದ ನೀರಲಿ ಚಂದ್ರಬಿಂಬ
ಹುಲ್ಲುಹಾಸಿನ ಮೇಲೆ ಚಿಕ್ಕಬಂಡೆ
ನಮ್ಮಿಬ್ಬರಿಗೆ ಮಾತ್ರಾ ಎಡೆ

ಒಳಗೆ
ನಾ ಮುದುರಿದಾಗ ಗರಿಗೆದರಿ
ನೀ ಕರೆವೆ
ನಾನಿಳಿದಷ್ಟೂ ನೀನಾಳ
ಸೊನ್ನೆಯಾಗಿರಬೇಕು ನೀನು ನನಗೆ
ಸಮಾಂತರಗಳೇ ನಾವು
ಅಲ್ಲವಾದರೆ ಬಾ ಒತ್ತಟ್ಟಿಗೆ

ಮಾತುಗಳು

ಹುಟ್ಟುತ್ತವೆ : ಸಾಯುತ್ತವೆ

ಪೂರ್ಣ ಊನದಲಿ
ಚಿಗುರು ಬಲಿಕೆಯಲಿ
ಉಸಿರಾಡುತ್ತವೆ

ಕಾವುಂಡು ಹಬೆಯಾಗುತ್ತವೆ
ಹಳಿಯ ಮೇಲಿದ್ದರೆ ಸರಿ
ಆಸ್ಪತ್ರೆಯೋ ಮಸಣವೋ ಹಾಗಲ್ಲದಿದ್ದರೆ

ಮನಸ್ಸಾಗುವ ಮಾತುಗಳು
ಮನೆ ಕಟ್ಟಿಸುತ್ತವೆ
ನಗ್ನವಾಗುತ್ತವೆ : ಸೂಟು ಧರಿಸುತ್ತವೆ

ರಕ್ತ ರಾಗ ದ್ವೇಷವಾಗುತ್ತವೆ
ದುಂಬಿದೊಂಬಿ ಕ್ರಾಂತಿಯಾಗಿ
ಮನಸ್ಸಾಕ್ಷಿಯಾಗುತ್ತವೆ

ಮಾತುಗಳು ಭೂತಗಳಾಗುತ್ತವೆ
ಕಾಡುತ್ತವೆ ಯಂತ್ರಮಂತ್ರಗಳಾಗಿ
ಅರಳುತ್ತವೆ ನಗುತ್ತವೆ
ಶಿಶಿರದಲಿ ಬೆವರಮಣಿಗಳಾಗುತ್ತವೆ
ಶಬ್ದವಾಗುತ್ತವೆ

ಮಾತುಗಳು ಬೀಜಗಳಾಗಿವೆ
ಕಾಯಬೇಕು ಸ್ಪಂಜಾಗಿದೆ
ಹೀರಬೇಕು; ಹಿಂಜಬಾರದು ಮತ್ತೆ

ಕವನಗಳಾಗಿ ಗಾಢಗೂಢವಾಗಿ
ಹೆಜ್ಜೆಗಳಿಂದ ದೂರಸರಿದು
ಒಮ್ಮೆ ಪಶ್ಚಾತ್ತಾಪವಾಗಿ ಬಿಡುತ್ತವೆ.
ಮತ್ತೊಮ್ಮೆ ಜ್ಞಾನ - ವಿಜ್ಞಾನ ದರ್ಶನವಾಗುತ್ತವೆ

ಮಾತುಗಳು; ಹುಟ್ಟುತ್ತವೆ
ಸಾಯುತ್ತವೆ
ಅರ್ಥವಾಗುವುದಿಲ್ಲ; ಅರ್ಥವಿರುವುದೂ ಇಲ್ಲ
ಮೌನವಾಗಿ ಬಿಡುತ್ತವೆ

ಸಿಂಧುವಿನಲ್ಲೀಗ

ಸಿಂಧುವಿನಲ್ಲೀಗ ಹುಚ್ಚು ಪ್ರವಾಹ
ನೀವು ಕಂಡಿರದಂಥ ಕೇಳಿಯೂ ಇರದಂಥ
ಹುಚ್ಚು ಪ್ರವಾಹ

ಪ್ರಶ್ನೆಯಷ್ಟು ಅಲೆಗಳು ಭೀಭತ್ಸ ಸುಳಿಗಳು.
ಮೊಸಳೆ ಅಕ್ಟೋಪಸ್ ತಿಮಿಂಗಿಲಗಳು
ಬಂದವೆಲ್ಲಿಂದ —

ಸುತ್ತಲಿನ ನೆಲವೆಲ್ಲ ಸಿಂಧುಮಯವಾಗಿ
ಕೊಚ್ಚಿ ಹೋಗುತ್ತಿದೆ ನಮ್ಮ ಧಾನ್ಯಾನಂಗಳ್

ಈ ಕೊರೆವ ಛಳಿಯಲ್ಲೂ ಹೇಮಂತನ
ಹಿಮವೆಲ್ಲ ಕರಗಿ ಕರಗಿ ಇತ್ತಲೇ ಹರಿದಿರಬೇಕು

ಬ್ರಹ್ಮಪುತ್ರನ ಹರಿವು ಬರಿದಾಗಿ
ಬೋಳು ಹಿಮಾಲಯ ನೆಲಕಚ್ಚಿರಬೇಕು

ಪ್ರವಾಹದಲಿ ಕೊಚ್ಚುತ್ತಿರುವ ನಾವು
ಜೊಂಡು ತುಂಡುಗಳ ಹಿಡಿದು ಬದುಕುವುದಿಲ್ಲ
ಬದುಕಿಸುವಂಥ ಬಾಬಾಗಳು ಇಲ್ಲಿಲ್ಲ

ಸಾಯಬಹುದೇ ಹೀಗೆ ಪ್ರವಾಹದ ದಿಕ್ಕು ತಿರುಗಿಸದೇ
ಸೊಕ್ಕಿದೆತ್ತಿಗೆ ಮೂಗುದಾರವಿಕ್ಕದೆ
ಅದಕೆ ನಾವೆಲ್ಲಾ ಬದುಕಲೇ ಬೇಕು
ತೂರಿ ಹೋಗುವ ತುಂಡುಗಳ ಕಟ್ಟಿ ಒಂದಾಗಿ
ತೆಪ್ಪ ಕಟ್ಟುವ

ಹುಟ್ಟುವಾಗ ನಾವೇನು ಸಿಂಧುವನ್ನು ಕೇಳಲಿಲ್ಲ
ಸಾಯಲು ಅವಳ ಒತ್ತಡವೇಕೆ
ಭೋರಿಡುವ ಪ್ರವಾಹಕೆ ಕಡಿವಾಣವಿಕ್ಕಿ
ಈ ನೆಲವ ಮತ್ತೆ ಬಿತ್ತಿ
ನಾವು ಬೆಳೆಯಲೇಬೇಕು.

೧೯೭೫. ಜೂನ್

ಕಾಮನಬಿಲ್ಲು

ಕಾಲುಮುರಿದ ದಿನಗಳು
ಕಾತರದ ಕ್ಷಣಗಳು
ಕುಣಿವ ನೆಗೆವ ಸುತ್ತಲು
ಅರಿವು ಹಿಂಡುವ ನೋವು ಮುತ್ತಲು

ಜೇಡ ಜಾಲಗಳ ಸೂರ ನಿರುಕಿಸುವಾಗ
ಹಿಂದಿನ ಚಿತ್ರ ಮುಂದಿನವಕೆ ಹಾಕಿ
ಪ್ರಶ್ನಾರ್ಥಕ ಚಿನ್ಹೆ

ಮನದ ತುಮುಲಕೆ ತರ್ಕ ವಿತರ್ಕದಾಜ್ಯ
ಕನಿಕರದ ಸಮಿತ್ತು: ಪ್ರೀತಿಯ ಸಾಂತ್ವನ
ಕಾಲಸ್ಥಾಣುವಾದೀತೆಂಬ ನಡುಕ
ಕಿಂಡಿಯಿಂದೆಸೆದ ರವಿಯ ಕೋಲ್ಹಿಡಿದು
ಆಕಾಶಕೆ ಜಿಗಿವ ಬಯಕೆ
ಯಾರು ಕಟ್ಟಿದರು ಈ ಕರ್ಮಕ್ಕೆ ಹರಕೆ

ಕೈಕಾಲು ಆಡದಾದಾಗ ಕಲ್ಪನೆಯ ಸಾರೋಟು
ಬಳಸಿ ಮನೆಮಾರು ಮಿತ್ರರು
ಹಿನ್ನೆಲೆ-ಮುನ್ನೆಲೆ ಪುರಾಣ
ವಿಜ್ಞಾನ ಇತಿಹಾಸ ಚಕ್ರಬಂಧದ ತೊಡಕು

ಡಾಕ್ಟರ ನೆನಪು ಸಿಸ್ಟರ ಒನಪು
ಮದ್ದು ಚುಚ್ಚು ಅರಿವಳಿಕೆ

ನೋವು ತಿನ್ನುವ ನೋವು
ಪದರ ಪದರ ಬಿಚ್ಚಿ ಹೆಣೆದು ಹಾಕಿ ಸವಾಲು
ಪ್ರಕೃತಿ ಬಿಚ್ಚುತ್ತ ಬಿಚ್ಚುತ್ತ
ಅನಂತತೆಯ ಸರಮಾಲೆ

ಕಾಲು ಮುರಿದ ದಿನಗಳು ಕಾತರದ ಕ್ಷಣಗಳು
ಸವಾರಿ ಅವರಿವರ ಮೇಲೆ
ಕಣ್ಣು ಕಿವಿ ಬಾಗಿಲಲ್ಲೆ
ಯಾರ ಮೋಡಿಗೋ ಸಿಕ್ಕಿ ನಲುಗಿದಂತೆ

ಮೋಡ ಮುಚ್ಚಿತ್ತು; ಮಳೆ ಹೊಯ್ಯುತ್ತಲಿತ್ತು
ಮರುಘಳಿಗೆ ರವಿಕಿರಣ
ನುಸುಳಿ ಹೇಳಿತು
ಆಗಸದಲ್ಲಿ ಹಾಕಿದ್ದೇನೆ ಕಾಮನ ಬಿಲ್ಲು

ಎತ್ತರಕೆ ಬೆಳೆದವನು

ನಮ್ಮೆಲ್ಲರ ನಡುವೆ ಒಡನಾಡ್ಯೂ
ಎತ್ತರಕೆ ಬೆಳೆದವನು
ಆಳಕ್ಕೆ ಬೇರು ಬಿಟ್ಟು
ತಳದ ಪಸೆಯ ಹೀರಿ
ನೆಳಲ ಪಸರಿಸಿದವನು

ಮೇಲೆ ಗೂಡು ಕಟ್ಟಿದ ಹಕ್ಕಿ ಪಿಕ್ಕಗಳು
ಗಿಳಿ ಗೊರವಂಕ ಕಾಗೆ ಗೂಗೆ
ಹಾವೂ ಹುತ್ತಗಟ್ಟಿದೆ ಕೆಳಗೆ

ಹನ್ನೊಂದರೊಳಗೊಂದಾಗಿದ್ದವ
ಪರದೇಶಕ್ಕೆ ಹೋದೆಯಂತೆ
ಪಿಂಚಲಿತ್ತಿ ಧೀಮಂತನಾದೆಯಂತೆ
ಬಂದೀಖಾನೆಯ ಗೋಡೆ ಹಾರಿ
ಊರೂರು ಸುತ್ತಿ ಸ್ಫೂರ್ತಿ ತುಂಬಿದೆಯಂತೆ

ನಂಬಿಕೆಯ ಬುಡ ಅಲ್ಲಾಡಿದಾಗೆಲ್ಲ
ಮೂಗು ಹಿಡಿದು ಕೂತ ಭೂಪ
ನಕ್ಕಾರೊ ನಮ್ಮ ನಾಯಕರು ನಿನ್ನ ನೋಡಿ
ಗದ್ದುಗೆಯ ಸರಿಸಿ ಕಾಲಲ್ಲಿ
ಚಂಬಲ್‌ನ ಏರು ತಗ್ಗಿನಲಿ
'ಮಾಧೋಸಿಂಗ್ ... ಮಾಧೋಸಿಂಗ್' ಎನ್ನುತ್ತ
ಅಲೆದ ನಿನ್ನ ಹುಚ್ಚುತನಕೆ ಹೇಸಿ

ನನ್ನ ಅರಿವಿಗೆ ನಾ ಬಂದಾಗ
ಮಡುಗಟ್ಟಿತ್ತು ಚೇತನ
ಅತಂತ್ರವೇ ತಂತ್ರವಾಗಿ ನೊಂದಿತ್ತು ಮನ
ಕೇಳಿದ್ದು ನಿನ್ನ ಕ್ಷೀಣಧ್ವನಿ
ಕಂಡಿದ್ದು ಸೋತ ಕೈಕಾಲು
ಬಡಕಲು ದೇಹ ಜನತಂತ್ರ ಪುರುಷ
ಉರುಲು ಬಿಗಿಯುತಿತ್ತು ಸರ್ವಾಧಿಕಾರಿಯುಕ್ತಿ

ಮುದುಕ
ಮುರಿದೆ ಮತ್ತೊಮ್ಮೆ ಸಂಕೋಲೆ
ಕೆರಳಿಸಿ ಯುವಶಕ್ತಿ ಜ್ವಾಲೆ
ನಿನ್ನ ಹೆಸರಿನ ಹಾದಿ ಹಲವರಿಗೆ ಗಾದಿ
ಆಗಲೇ ರಾಜಘಾಟಿನಲಿ ನಿನಗೂ ಸಮಾಧಿ
ನಿಜಕೂ ಸತ್ತಾಗ ನೀ ಛಿದ್ರ ಛಿದ್ರ

ಜೆ.ಪಿ.
ಈ ಲೋಕದ್ದು ಅಲ್ಲ ನಿನ್ನ ವ್ಯಾಪಾರ
ಬರಿದೆಕೊಟ್ಟೆ ತೆಗೆದುಕೊಳ್ಳಲಿಲ್ಲ ಏನೂ
ಅಷ್ಟಕ್ಕೂ ಏನಿತ್ತು ನಮ್ಮಲ್ಲಿ ನಿನಗೆ ಕೊಡಲು

[illegible]

[illegible]
[illegible]
[illegible] ಕಮಲ ||ಕಮಲ||

[illegible]
[illegible]
[illegible] ಮಲ್ಲಿಗೆ ||ಮಲ್ಲಿಗೆ||

[illegible]
[illegible]
[illegible] ನನ್ನ [illegible]
[illegible] ಗುಲಾಬಿ ||ಗುಲಾಬಿ||

[illegible]
[illegible]
[illegible]
[illegible] ಸಂಪಿಗೆ ||ಸಂಪಿಗೆ||

[illegible] ನನ್ನ [illegible]
ಅರಳಿ ಮೊಗ್ಗಾಗಿರುವೆ
ಮೊಗ್ಗಾಗಿಯೆ ಅರಳಿರುವೆ
[illegible] ನನ್ನ
[illegible]
ನನ್ನ [illegible]
[illegible]

ತಿಳಿಯಾಗು

ತಿಳಿಯಾಗು ತಿಳಿಯಾಗು
ತಿಳಿಯಾಗು ಮನವೇ

ಇತ್ತಿಂದ ಅತ್ತಿನವರೆಗೆ
ಅತ್ತಿಂದ ಅನಂತದವರೆಗೆ
ಅನಂತದಿಂದ ಅಣುವಿನವರೆಗೆ
ಕಾಣುವಂತೆ ತಿಳಿಯಾಗು
ತಿಳಿಯಾಗು ಮನವೇ

ಕಾವು ಬಿಡಿಯಾಗಿ
ಬಿಡಿಯು ಗಡಿಮೀರಿ
ಗಡಿ ದಿಗಂತವಾಗುವಂತೆ
ತಿಳಿಯಾಗು
ತಿಳಿಯಾಗು ಮನವೇ

ಜಗದ ಚಲನೆಯು ಎಲ್ಲ
ಚಲದ ಗುಣವೆಲ್ಲ
ಗುಣದ ಮರ್ಮವನೆಲ್ಲ
ಅರಿವಂತೆ ತಿಳಿಯಾಗು
ತಿಳಿಯಾಗು ಮನವೇ

ಒಳಬೆಳೆವ ವಿಶ್ವ
ವಿಶ್ವಾಂತರಂಗ
ರಂಗದಾಟೆಯ ನೆಲೆಯ
ಹಿಡಿವಂತೆ ತಿಳಿಯಾಗು
ತಿಳಿಯಾಗು ಮನವೇ

ಜಡವೊಂದಿದ ಚಿತ್ತ,
ಚಿತ್ತ, ಅರಿತ ಸತ್ತ,
ಸತ್ತ, ಸೇರಿದ ಆನಂದ
ಮಯವಾಗುವಂತೆ ತಿಳಿಯಾಗು
ತಿಳಿಯಾಗು ಮನವೇ

ನಾನೆಲ್ಲ ನೀನಾಗಿ
ನೀನೇ ಶೂನ್ಯವಾಗಿ
ಶೂನ್ಯದಲಿ ನಾಪತ್ತೆ
ಯಾದಂತೆ ತಿಳಿಯಾಗು
ತಿಳಿಯಾಗು ಮನವೇ

ಬೆಳಗು

ಕಣ್ಣು ಬಿಟ್ಟಾಗ ಮತ್ತೊಂದು ಬೆಳಗು
ಮುದುರಿದ ಹಾಸಿಗೆ ಜರ್ಜರಿತ ಸುಮಗಳು
ಮಾಡ ಮೂಲೆಯ ಜೇಡ
ಮತ್ತೆ ಜಾಲದ ಹೆಣಿತ ಹಸಿವು ಬಾಯಾರಿಕೆ
ಎಂದಿನಂತೆ ಹಳಸಲನ್ನಕ್ಕೆ ಹದ್ದುಗಳು
ಹೊಸ ತಾರೀಖು ಸಾಘಾದ ಮುಖಕೆ ತಾರೀಫು

ಸೂರ್ಯ ಹೊಂಬಣ್ಣ ಚೆಲ್ಲುತ್ತ ಹುಟ್ಟುತ್ತಾನೆ
ಸವಳು ಮಣ್ಣೆಂದೆದ್ದ ಸೀಮೆಜಾಲಿ
ಕಡಿಯುತ್ತಾರೆ ಕರಿಮಯ್ಯ ಮಿರಿಮಿರಿ ಮಿಂಚು
ಕಟ್ಟು ಮಸ್ತಾದ ಹೆಣ್ಣುಗಳು
ಗಟಾರಕ್ಕೆ ಸೊಳ್ಳೆ ನಾಶಕ
ವೃತ್ತಗಳಲಿ ಪೋಲಿಸಿನವರು

ಬೆಳಬೆಳಗೂ ಒಂದೊಂದು ಕಲ್ಲು
ಎದ್ದೂರು ಸುತ್ತಿದ ಕೋಟೆ
ನಿಗುರಿ ಗುಡ್ಡದ ತೋಪು
ಕೆಳಗೊಳಗೊಳಗೆ ತಿರುಚಿದೂರು
ದಿಡ್ಡಿ ಬಾಗಿಲು
ಆಚೆಯೊಂದು ಕೇರಿ
ಈಚೆಯೊಂದು ಕಾಲೋನಿ

ಶತಶತಮಾನಗಳ ಬೆಳಗು
ವೇದಘೋಷ ಮಂತ್ರವೇ ಮಾತು
ಚಪ್ಪಾಳೆ ಮಾತೇಮಂತ್ರ
ತಿರುಗಣೆಯಲಿ ಸಿಕ್ಕಿದ ಉಸಿರು
ಜಾರಿದ ಹಲವಾರು ಬಸಿರು

ಪ್ರಿಯದ ಸೂರ್ಯ ಗುಡಿಯಲ್ಲಿದ್ದರೆ
ಬಾನಂಚಿನ ಕಡಲು ಮರುಗುತ್ತದೆ
ಬಾನಂಗಳ ಬಿಡುತ್ತದೆ ಗಾಯತ್ರಿ
ಕಾಯಿಗಳ ಹಣಿಯುತ್ತದೆ
ಬಾನಂಗಳವಿದ್ದಲ್ಲಿ ಹಾರಾಡಲು

ಮನಸಿನಲ್ಲೆಲ್ಲ ಬೆವರು ಕಮರಾಗುತ್ತಿದೆ
ಕಣ್ಣಿ ಬೆನ್ನಾಗಿ ಮರ್ಮ ಮಡಿಯಾಗುತ್ತಿದೆ
ಜೀವ ಸತ್ತು ಕೊಳೆಯುತ್ತಿದೆ.

ಹಕ್ಕಿ ಹಾಡಾಗುತ್ತದೆ
ನೆನಪಿನೊಳು ಒಲವಿನ ಮತ್ತೆ ಮಾಡುತ್ತಾರೆ
ಸೂರ್ಯ ಬೆಳಗಿ ಹಾಡುತ್ತಾನೆ
ರಾತ್ರಿಯಾದರೆ ಬೆಳದಿಂಗಳ
ಮಲ್ಲಿಗೆಯಿಂದ ಬಟ್ಟೆ ಎಂದು ಬೆಳಗುತ್ತದೆ.

ಹೊಸ್ತು ಬೆಳ್ಳಗ
ಮುಗಿಲ್ಲಾದ ಬೆಳಗು.

ಧಿಕ್ಕಾರವಿರಲಿ

ನಿನ್ನೆ ಸಂಜೆ ನೋಡಲಿಲ್ಲ ನಿನ್ನ
ಮೊನ್ನೆ- ಅದರಾಚೆ ನೋಡಿದ್ದೇನೆ
ಹಲವು ಸಂಜೆಗಳಲಿ

ಹೆಸರು ಕೇರಿ ಧಣಿಯ ಗುರುತು
ಹೆಂಡತಿ ಗೊತ್ತಿಲ್ಲ ದಿಟ
ಬೇಕಿರಲಿಲ್ಲ ಗೋತ್ರ ಪ್ರವರ

ರಸ್ತೆಮೂಲೆಯ ಚಾದಂಗಡಿಗೆ
(ಹೀಗೆಂದೇ ಕರೆಯುವುದಲ್ಲವೇ ನೀವು)
ತಪ್ಪದೆ ನಿನ್ನ ಹಾಜರಿ
ಕಣ್ಣು ಬಾಯಿ ಎಲ್ಲರಂತೆಯೇ ಎಲ್ಲ
ಒಂದಿಷ್ಟು ಗಟ್ಟಿ ಮಾಂಸಖಂಡ

ಕಟ್ಟೆಯೊಡದಂತೆ ಚಾದಂಗಡಿ
ವರಸಮ್ಮನ ಮೆಣಸಿನಕಾಯಿ
ಮೆಲ್ಲುತ್ತ ಸೀರೆ ಬಿಚ್ಚಿ ಹಾಕುತ್ತೀರಿ
ಲಗ್ಗೆ ಕರಿಸೇಠನ ಬಿಳಿಮನಿಷಿಯ ಕಚ್ಚೆಗೆ
ಪಾನು ಕಾಚುಗಳ ಕೊಳಕು ಬಾಯಿ
ಹಿಗ್ಗಲಿಸಿ ಕೊಟ್ಟೀರಿ ಒಂದಿಷ್ಟು ಸ್ವಾತಂತ್ರ್ಯ

ಇದ್ದಿರಬೇಕು ನಿನಗೂ ಹೆಂಡತಿ ಮಕ್ಕಳು
ನಿತ್ಯರಾತ್ರಿ ಹೆಪ್ಪುಗಟ್ಟುವ ಸಮಯ
ಕಾಯುತ್ತಿರಬೇಕು ತೂರಾಡುತ್ತ ನೀ ಬರುವ ಹಾದಿ

ನಿನ್ನೆ ರಾತ್ರಿ ನೀ ಮನೆಗೆ ಹೋಗಲೇ ಇಲ್ಲ

ನಿನ್ನೆಯಷ್ಟೆ ನೂರಾರು ಮಂದಿ ಉಚ್ಚೆ ಹುಯ್ಯುವ
ಕಡೆ ನೆಣ ಬಣಿನ ಹರಿದಿತ್ತು
ಕತ್ತು ಕಿರುಚಿತ್ತು

ಯಾರೋ ದಿಕ್ಕಿಲ್ಲದವನಂತೆ
ಪೋಲೀಸು ಮಂದಿ ಕಟ್ಟಾಡಿ ಸಾಯ್ತಾರೆ
ಜನರ ಉಬ್ಬುತಗ್ಗು ಅಕ್ಕಪಕ್ಕದಂಗಡಿಗೆ ದಪ್ಪಬೀಗ

ಧೂಳಿದಿಬ್ಬ ಸುತ್ತ ಸರಸರ ಕಾರು ಜೀಪು
ಶೋಕ ಹಾರಮ್ಮ (ಸಮಾಜ ಕಲ್ಯಾಣ ಮಂತ್ರಿಯದಂತೆ)
ಹಾರ ತುರಾಯಿ ಎಲ್ಲಾ ಮಾಮೂಲು

ನೀ ಕಾಣದೀ ಸಂಜೆ ನಿನ್ನಿನಂತೆಯೋ
ಪಾನಂಗಡಿಯ ಬೀಡಿ ದಂಧೆ
ಸರಾಯ್ಯಾವ ಮೆಣಸಿನಕಾಯಿ
ನಿನ್ನ ಗೆಳೆಯರು ಎಲ್ಲಿ ಎಂದಿನಂತೆ

ಆಯುಷ್ಯ ತೀರಿದ್ದಕ್ಕೆ ನೀ ಸತ್ತೆ
ಎಂದು ತೀರ್ಮಾನವಾಗಿದೆಯಂತೆ
ಹುಟ್ಟಿದ್ದು ದಾಖಲಿಲ್ಲ ಬಹುಶಃ ಸತ್ತಿದ್ದು
ಹೇಳು ಗೆಳೆಯಾ (ಬದುಕಿದ್ದಾಗ ಹೀಗೆ ಕರೆವ ಧೈರ್ಯವಾಗಲಿಲ್ಲ)
ಯಾರು ನೀನು? ಯಾವ ಊರಿನವ?
ಯಾರ ನೊಗಕೆ ಒಡ್ಡಿತ್ತು ಕತ್ತು

ಗೊತ್ತಿದೆ ಉತ್ತರಬಾರದೆಂದು
ಹುಡುಕುವ ಗೋಜಿಗೆ ನಾ ಹೋಗುವುದಿಲ್ಲೆಂದು

ಹೇಸಿಗೆಯಾಗುತ್ತಿದೆ ನನಗೆ
ಲೇಖನಿಯ ಮೊನೆಗೆ
ನಿನ್ನ ಸಿಗಿಸಿದ್ದಕ್ಕೆ
ಧಿಕ್ಕಾರವಿರಲಿ ಈ ಷಂಡತನಕೆ

ಮಗನ ಕನಸು

ಯಾಕೋ ನನ್ನ ಮುದ್ದು ಮಗನೇ
ಬೆಳಗಾದು ಬೆಳಗ್ಗ
ಅಂಬಿನ ನರ ಹರಿದಂತೆ ಕಿರುಚುತ್ತಿದ್ದಿ?
ಹಸಿವಾಗುತ್ತಿದೆಯಾ? ಕಿರುಚುವ ಆಟಿಕೆಯೇನು?
ಹಾಸಿಗೆಯಲ್ಲಿ ಉಚ್ಚೆ ಮಾಡಿಕೊಂಡೆಯಾ?
ಏನು ಬಯ್ಯುವುದಿಲ್ಲ

ಯಾಕೆ ಮರಿ ಕನಸು ಬಿದ್ದಿತೆ ಹೇಳು
ಯಾವಂಥ ಹಸಿ ಮಾರಾಯ
ಹಾಡಲೇನು ಜೋಕೆ ಅಳಬೇಡ
ನಾಳೆಗೆ ಮರೆಯದೆ ತರುವೆ

ಗೋಲಿ ಬುಗುರಿ...ಮೂಲೆಯಂಗಡಿಯ
ಸೆಟ್ಟಿಯಲ್ಲಿ ತೆಗೆದುಕೊಂ ಅಕ್ಕನಲ್ಲಿ
ಹೊಸದಿದ್ದು ಬೇಕಾದರೆ ಕಾಯಬೇಕು
ಸಂಬಳದ ತನಕ
ಸೊಸೈಟಿಯಲ್ಲಿ ಹೊಸ ಸಾಲ ತೆಗೆವಾ

ಛೀ ... ಇವಳೆ ...
ಏನಾಯಿತು ನಿನ್ನ ಕಿವಿಗೆ
ಕೇಳುವುದಿಲ್ಲವೇ ನಿನ್ನ ಮಗನ ಸಂಗೀತ

ಬಾರೋ ಮರಿ ... ಬಾ ... ನನ್ನ ರಾಜ
ಎಂಥ ಗಂಡಸಪ್ಪ ನೀವು
ಅಡಿಗೆಯಾಗಬೇಡವಾ?... ಆಫೀಸಿನತ್ತು ಹತ್ತಬೇಡವಾ?
ರೀ ......

ಕೇಳಿದಿರಾ ನಿಮ್ಮ ಮಗನ ಬಯಕೆ
ರಾತ್ರಿ ಕನಸು ಬಿತ್ತಂತೆ ನಿಲ್ಲಿಸಬೇಕಂತೆ
ಎದುರು ಗುಡ್ಡದಲಿ ಬಾಹುಬಲಿ

ಅಯ್ಯೋ ......
ಎಂಥ ಕನಸಪ್ಪಾ
ಕನಸಾದರೂ ಏಕೆ ಬಿತ್ತೊ ನಿನಗೆ
ಕನಸುಕಾಣುವುದು ಮೂಲಭೂತ ಹಕ್ಕಲ್ಲ ಮಗನೇ

ಕನಸುಗಳ ನನಸು ಮಾಡಲು
ನಾನೇನು ಕರ್ಮಣ್ಯಳದವನೇ
ಬಾಹುಬಲಿಯನ್ನು ನೋಡಲೇಬೇಕೆಂದರೆ
ಬಾ ...... ಬಚ್ಚಲಮನೆಗೆ

ಎರಡು ಅಕ್ಟೋಬರ್

ಇಂದೂ ಬದಲಿಸಿಲ್ಲ ತಾತ
ನಿನಗೆ ಹಾಕಿದಹಾರ
ಬೀದಿಕೊನೆಯಲಿ ನಿನ್ನಪ್ರತಿಮೆ
ಮೂರಿಂಚು ಧೂಳು ಮುರಿದ ಕನ್ನಡಕ

ಸುಗ್ಗಿಯೋ ಸುಗ್ಗಿ ನಿನಗಿಂದು ತಾತ
ಪತ್ರಿಕೆ ಬಾನುಲಿ ದೂರದರ್ಶನ ನಿನ್ನ
ಗಾನ ಸಮೃದ್ಧ ದಶಕಗಳ ಸಂಪ್ರದಾಯ

ಪಂಚವಾರ್ಷಿಕಗಳ ಮೇರುವಿನಡಿಯಲಿ
ನಾ ಹುಟ್ಟಿದಾಗ ನೀ ಸತ್ತಿದ್ದೆ ತಾತ
ಪೋರ - ಬಂದರು ನವ-ಖಾಲಿಯಲಿ
ತೂಗಾಡುತಿತ್ತು ನಿನ್ನ ಬೋರ್ಡು

ನಿನ್ನ ಜಯಂತಿಯಲಿ ನಾವು ಹಾಡಿದ್ದು
'ಅಜ್ಜನ ಕೋಲಿದು ನನ್ನಯ ಕುದುರೆ
ಕಾಲಿಲ್ಲದೆಯೇ ಓಡುವ ಕುದುರೆ'
ಮಂತ್ರಿಗಳ ತಲೆ ತೂಗಿದ್ದೂ ತೂಗಿದ್ದು

ಎರಡು ಅಕ್ಟೋಬರ್
ನೂರಾರು ಯೋಜನೆಗೆ ಹೊಸ ಕರಾರು
ಹಸಿದ ಹೊಟ್ಟೆಗೆ ಅನ್ನ ಬರಿಮೈಗೆ ಬಟ್ಟೆ
ಹೊಲಕೆ ನೀರು ತಲೆಮೇಲೆಸೂರು
ಒಂದೇ ಎರಡೇ ಬುದ್ಧಿಯು ಬರದೇ

ರಾಜಘಾಟಿನಲಿ ನಿನ್ನ ನೆನಪಿನ ಘಾಟು
ಧೃತರಾಷ್ಟ್ರನಪ್ಪುಗೆಯ ಪಟ್ಟು
ಭೇದವಿಲ್ಲ ನಮ್ಮಲಿ ಈ ಪಿತೃಪ್ರೇಮದಲಿ
ಅದಕ್ಕೆ ಕಾಯ್ದಿರಿಸಿದ್ದೇವೆ ನಿನ್ನ ಮನೆ
ಕಿತ್ತಿಲ್ಲ ಒಂದು ಮೊಳೆ ಹೊಡೆದಿಲ್ಲ ಮತ್ತೊಂದು
ಮಾತುಗಳ ಮಂತ್ರಿಸಿ ಹಾಕಿದ್ದೇವೆ ತೂಗು
ಹೆಜ್ಜೇಕೆ "ಯುನೊ"ದಲ್ಲೂ ಹೇಳಿದ್ದೇವೆ ನಿನ್ನ ಹೆಸರು

ತಾತ ನೀ ಹೋದಮೇಲೆ
ಎಷ್ಟು ಕೆಲಸ ನಡೆದಿದೆ ಗೊತ್ತೇ
ಬಿಳಿ ಬಿಳಿ ನಿನಾದಕ್ಕೆ ಹಾಕಿ ಅಡ್ಡ
ಕಟ್ಟಿದೆವು ಪವರ್ರು - ಹೌಸು
ಗಿರಣಿಗಳ ಬಾಗಿಲಲ್ಲೆ ನಿನ್ನ ಚರಕ
ಸಿಡಿಸಿ ಮರುಭೂಮಿ ಆಕಾಶಕ್ಕೆ ಆರ್ಯಭಟ

ಹೇಗಾದೀತು ನಮ್ಮ ಕಷ್ಟದರಿವು
ಪಾಪ ಬೋರಣ್ಣನಿಗೆ
ಹರಿಸಿದ್ದೇವೆ ಬೆವರಹನಿ
ಹೆಚ್ಚಿಸಲು ಸಂತೋಷದ ಬುಗ್ಗೆ
ಧೂಳು ಒರೆಸಲು ಸಮಯವೆಲ್ಲಿ ನಮಗೆ
ಕೊಂಚ ತಾಳು ಖೇದವೇಕೆ ನಿನಗೆ
ಕರೆಸಿ ವಿದೇಶಿ ತಜ್ಞರ
ಬದಲಿಸಿ ಬಿಡುವೆವು ನಿನ್ನ ಶಿಲ್ಪ

ಹೊನ್ನಪಟ್ಟದ ಚೆಲುವೆ

ನಿನ್ನ ನಗು ಸುಮಧುರ್ಯ
ಸ್ವರ್ಣದ ಬಣ್ಣ ಸ್ವಯಂವರ ಆ ಅರ್ಪಣೆಯ
ಕಣ್ಣಿನಲ್ಲಿದ್ದ ತಾರೆ ಸೌಂದರ್ಯದ ಸಾಗರದ
ಸಾಗರ ಗಂಭೀರ ಪ್ರಕೃತಿಯಾಗಿ
ಅರಳಿದ ನನ್ನ ಮನ ಭಾವನೆ
.....ಕಲ್ಲ.......ಕಲ್ಲು ಸಾಗರ ಸಲ್ಲ

ಹಸಿರ ಸಿರಿಯ ತೆನೆಯ ತುಂಬಿರುವ
ಹಿರಿಯ ಸಿರಿ ಅರ್ಪಣ ಹಿರಿಯವರಿಗೆ
ಭವ್ಯ ಬದುಕಿಗಾಗಿ ಆ ನಾಡ ಹೆಸರೇ ಮಹಿಮೆ
ನಿಲುವ ಕಲಾಕೃತಿ ಮನದ ಮಾನವತೆಯಲಿ
ಮನುಷ್ಯತ್ವ ಮಾನವತೆ ನಿನ್ನ ಚಿತ್ತದಲಿ ಹರಿಯೆ

ನಿನ್ನ ಕೃತ್ಯದಲಿ ನೀ ಸಂಪತ್ತಿ ಬದುಕಿಗೆ
ಚರಿತ್ರೆಯಾದ ಬಾಳು ತ್ಯಾಗ
ಅಳಿವಾಗಿಲ್ಲ ನೀ ಭವ್ಯ ದಿವ್ಯವಾಗಿರುವ
ಹಿಂದಿಹದೆ ಮುಂದಿರುವದೆ ಪ್ರೀತಿಹದೆ
ನಿನ್ನ ವೈಭವವಿಲ್ಲ ಎಂದೂ

ಹರಿತ ಮಾಡುವ ಕ್ಷಣದ
ವ್ಯಕ್ತಿ ಭಾವದ ಮೂಲ ನಿನ್ನ ತವರು
ಅಮೃತದ ಆನಂದದಲಿ ಹರಿದ ದಿಕ್ಕಿನ ನಾಗಿ
ಸತ್ಯದಿಂದ ಸತ್ಯಕ್ಕೆ ಹರಿದ ನಿನ್ನ ಜಾಡಿನೇ

ಮುಂಗಟ್ಟಿಲ್ಲಿ ಬರ್ರನೆ ..... ಸರ್ರನೆ
ಅಟ್ಟಹಾಸ್ಯಾನ ಗದ್ದಲ
ವಿರೋಧಾಭಾಸ್ಯಾನ ಸೃಜಿಸಿದ
ವಿರೋಧ ವಿರೋಧಗಳಲಿ ಜ್ವಲಿಸಿದ
ದೇಶ ಕಾಲಗಳ ಮೆಟ್ಟಿ ಬೆಳೆದ ಹಿಮಾಲಯದೆತ್ತರ.

ದಬ್ಬಾಳಿಕೆಗೂ ದಲಿತರಿಗೂ ನಡುವೆ
ಛಿದ್ರತೆಗೂ ಸಮಗ್ರತೆಗೂ ನಡುವೆ
ಎದ್ದ ಮಹಾನ್ ನಡುಗಡ್ಡೆ ನೀ
ಒಂದೆರಡು ತಿಂಗು : ಅಷ್ಟಿಷ್ಟು ತಾಳಿ ಕೊನೆದಾದಿದ್ದು ನಿಜವಾದರೂ
ವಿನಾಶಕ್ಕೆ ಅಡ್ಡಗಾಲಿಟ್ಟು ಇತಿಹಾಸ ಬರೆದೆ

ಇತಿಹಾಸದ ಗರ್ಭಕೋಶ ನೀ
ಚಿಮ್ಮಿ ಬರಬಹುದು
ಹರಿವ ಕಣ್ಣೀರ ತೊಡೆಯಬಹುದು
ಹೇಳು ಗೆಳತಿ ಎಂಥ ಸ್ಮಾರಕ ನಿನಗೆ
ನೀ ಸೃಜಿಸಿದ ಶೂನ್ಯವಲ್ಲದೆ ಬೇರೆ

೩೧-೧೦-೧೯೮೪

ಸಮನಿಲ್ಲ ನನಗೆ ಜರ್ಮನ್ ರಕ್ತಕೆ
ಹರಿಸಿದ ಕೋಟಿ ರಕ್ತಕೆ
ಬೆರೆಸಿ ನಮ್ಮ ಬದುಕು
ಕಟ್ಟಿದರು ಬರ್ಲಿನ್ನು ಗೋಡೆ
ಸ್ಟಾಲಿನ್ನಿನ ಬಿಗಿಮುಷ್ಠಿ
ಚರ್ಚಿಲ್‌ನ 'ವಿ'ಕಾರದ ಕೈ
ಸಮನಲ್ಲವೇ ಹಿಟ್ಲರನ ಮುಂಗಾಣದ ಅಹಂ ಬಗೆಗೆ

ಭಂಡರು ಬಿಗಿದುಕೊಂಡರು ಇತಿಹಾಸದ ಗಂಟಿಗೆ
ಬರುತ್ತಲೆ ಇಹರು ಮತ್ತೆ ಹೊಸಮುಖವಾದದಲಿ
ಕಟ್ಟುತ್ತಲೆ ಇಹರು ಬರ್ಲಿನ್ನು ಗೋಡೆಗಳ
ಒಳ-ಹೊರಗೆ ಎಲ್ಲ

ಇರುವುದೊಂದೇ ಭುವಿಯಲಿ ಬರಿಯ ಗೋಡೆಗಳೇಕೆ
ಸಾಕಿನ್ನು ಇವರ ಗೊಡವೆ
ಮಾಡಿ ಗೋಡೆಗಳ ನೆಲಸಮ
ಅರಳಲಿ ಸುಮ ಹೊಮ್ಮಲಿ ಪ್ರೀತಿ
ಹಂಚಿಕೊಳ್ಳಿರಿ ಅಸ್ತಿತ್ವ ಏಳದಿರಲಿ ಗೋಡೆ

ಹ್ಹಾ .... ಗೆಳೆಯ
ಕಂತೆ-ಪುರಾಣಗಳೇಕೆ
ಯಾವ ತುಂಡು ನಿನಗೆ
ಐವತ್ತರದೊ ....
ನೂರೈವತ್ತರದೋ ....

೫-೧೨-೧೯೯೨

ಆಶಯ

ನಾವಿನ್ನೂ ಬೆಳೆಯಬೇಕಿದೆ
ಬೇರುಗಳ ಹೀರಿ
ಆಳ ಅಗಲಕ್ಕೆ ಮತ್ತೆ ಮೇಲಕ್ಕೆ ಬೆಳೆಯುತ್ತ
ಮನದ ಮೂಲೆ ಮೂಲೆಗೆ ಬೆಳಕು ಚೆಲ್ಲುತ್ತ
ಶತಶತಮಾನಗಳ ತುಮುಲಗಳ ಕಡೆಯುತ್ತ
ಅಮೃತತ್ವ ಚಿಮ್ಮಿಸಿ ಹಂಚಿಕೊಳ್ಳಬೇಕಿದೆ

ಸ್ವಾರ್ಥ ಸಂಚು ಸಂಕೋಚಗಳ ಛಿದ್ರಗೊಳಿಸುತ್ತ
ಅಡೆ ತಡೆಗಳ ಕೆಡವುತ್ತ
ಕೈ ಜೋಡಿಸಿ ಕುಣಿದು ತಣಿಯುತ್ತ
ವಿಶ್ವಪ್ರೇಮದ ಮಧುರಗಂಧ ಹರಡಬೇಕಿದೆ

ಬೀಳುವ ಹನಿಗಳ ಹೀರಿ
ಬೀಸುಗಾಳಿಯ ಹಿಡಿ
ಬದುಕ ಸೃಷ್ಟಿಸುವ ಭುವಿ ದಿವಾಳಿಯಾಗುವ
ಮುನ್ನ ಚೈತನ್ಯದ ಗುಟ್ಟು ಅರಿಯಬೇಕಿದೆ

ಆಕಾಶದಂಚುಗಳ ಮುರಿದು
ನಕ್ಷತ್ರ ನೀಹಾರಿಕೆಗಳತ್ತ ಕೈ ಚಾಚಿ
ಹೊಸ ಹಂತಗಳ ಸೃಜಿಸಿ ಸೋಸಿ
ಬೇಕಾದ್ದು ಅರಸಬೇಕಿದೆ.

ನಾವಿನ್ನೂ ಬೆಳೆಯಬೇಕಿದೆ
ಅದಕಾಗಿ
ಬೆಳಕು ಪುತ್ಥಳಿಗಳ ನಿರ್ಮಿಸಬೇಕಿದೆ

ಉಳಿಕೆ : ಹದಿನಾರು

ಭಾಗ ಎರಡು

ನಲವತ್ತರ ಮುಸುಕಲಿ
ಹದಿನಾರರ ಗುದ್ದು
ಕೇಳದು ಸದ್ದು

ತುಂಬ ಕೆಲಸ ತುಂಬು ಬಯಕೆ
ಹತ್ತಾರು ಚಟುವಟಿಕೆ
ಚಪಲ ಚಡಪಡಿಕೆ

ಮುಂಜಾವದ ಇಬ್ಬನಿಯಲಿ
ಕುಣಿ ಕುಣಿದು ದಣಿದು
ಕಟ್ಟಿ ಹೊಟ್ಟೆ ಬಿಗಿದು ರಟ್ಟೆ
ಮನದ ಕಾವು ನಿಗಿನಿಗಿ

ಸುತ್ತಲೆಲ್ಲ ಅರಳಿದ ಹೂವು
ಸುಂದರ ಸೆಳೆವ ಚೆಲುವು
ಮಧುರ ಝೇಂಕಾರ ನಾದವು

ಗುರುತು ಪತ್ತೆ ಇರದ ಹೆಜ್ಜೆ
ಮೇರೆ ಮೀರಬಹುದಿತ್ತು ದಾರಿ
ಹಣ್ಣಾಗಲಿ ಹೂವು ಚಿಗುರಿ
ಬೇರು ಬಿಟ್ಟು ಸತ್ವ ಹೀರಿ

ಅಲ್ಲಿ-ಇಲ್ಲಿ ಹಕ್ಕಿಗೂಡು
ಮಕ್ಕಳು ಮರಿ ಬೆಚ್ಚಗೆ
ಗರಿಯ ಕೆದರಿ ಚಿತ್ತ ಕೆಣಕಿದೆ

[illegible]
[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]

ಬಿನ್ನಹ

ಕೃಷ್ಣನಲಿ

ಹಸಿದ ಕಂಗಳು
ಬಾಗಿದ ಶಿರಗಳು
ಸವೆದ ಚೊಂಬ್ಲುಗಳು
ತುಂಬಿದ ಸಭೆಯಲಿ
ನಿನ್ನ ಸೋದರಿ ಕೃಷ್ಣೆಯು
ಸೀರೆ ಕಿತ್ತೆಸೆವಾಗ ದುಶ್ಶಾಸನ ಗಡು
ಗಡು ಬಟ್ಟೆ ಕೊಟ್ಟ ಕೃಷ್ಣನೇ
ಬಯಲಾಗಿ ನಿಂತ
ನಮ್ಮೂರ ಕೃಷ್ಣೆಯರಿಗೆ
ಕೊಡಿಸು ಹರಿದ ತುಂಡು ಬಟ್ಟೆ

ಅರ್ಜುನನಲಿ

ಭೂಮಿಯನು ಸಿಗಿದು
ಚಿಮ್ಮಿಸಿದ ಸಿಹಿನೀರು
ತುಂಬಿಸು ನದಿಗಳೊಡಲು
ತುಡಿತಗಳ ಮಿಡಿಸು
ಈ ನೆಲದಲಿ ಇನ್ನೂ ಕೊಂಚ
ಇಷ್ಟಕ್ಕೂ
ಇಚ್ಛಾಮರಣಕೆ ಕಾದ ಭೀಷ್ಮ
ತಾಳಬಹುದು
ಗಟ್ಟಿ ಶರಮಂಚ

ಅಪ್ಪಿಕೋ

ಕಾಲಗರ್ಭವ ಸೀಳಿ
ಪುರಾಣದಾಚೆಯ ಗುಹೆಗಳಿಂದ
ನಡೆದು ಬಂದವನೇ

ಗಗನ ಭೇದಿತ ಶಿಖರಗಳಲಿ
ಸವಿನೀರ ಹೆಬ್ಬಂಡೆ ನವಿರು ಹಬೆಯಲಿ
ದೇವದಾರುಗಳ ಮರ್ಮರದಲಿ ಮೂಡಿಬಂದವನೇ

ಕಂದಮೂಲದ ಹಿಡಿಮ್ಮೈಯ್ಯಿ
ಸಪ್ತನದಿಗಳ ಕುಡಿದು
ಸಪ್ತನಾದವ ಮಿಡಿದು
ಸಪ್ತಸಾಗರದಲಿ ಈಸಾಡಿದವನೇ

ಪಂಚೇಂದ್ರಿಯಗಳ ಮಣಿಸಿ
ಪಂಚಭೂತಗಳನು ಉಸಿರಾಡಿದವನೇ

ಭೂತಳಕೆ ಬೇರಿಟ್ಟು
ಅತಳ ವಿತಳ
ತಳಾತಳವನೆಲ್ಲ ಪ್ರೀತಿಸಿದವನೇ

ನೆಲ ಮುಗಿಲುಗಳೊಂದಾಗಿ
ಕಾಡುಮೇಡಿನ ಮಿಣುಕು ಬೆಳಕಾಗಿ
ಹಕ್ಕಿಗಳ ರೆಕ್ಕೆಯಲುಗಿಗೆ ಎದೆಯೊಡ್ಡಿದವನೇ

ಭೂಶಿರದ ನಲ್ಲೆಯ ಚಿಗುರುಪಾದಗಳಿಂದ
ಶಿಖರಾಗ್ರದ ನಲ್ಲನ ಜಟಾಜೂಟದವರೆಗೆ
ಹುಲ್ಲೆ ಹೂ ತರುಲತೆಗಳಲಿ ಜೀವವಿಟ್ಟವನೇ

ಬಿಚ್ಚಿ ಜಡೆಯನು ಕಟ್ಟಿ ಅಟ್ಟಿಯನು
ಭಾಗೀರಥಿಯ ಜಳಜಳದಲಿ ಮೀಟಗಾರ
ಶಿವನ ಗೆಜ್ಜೆಯ ಶ್ರುತಿಯ ಹಿಡಿದಿಟ್ಟವನೇ

ಕಟ್ಟಿ ಅಡ್ಡೆಯನು ಬಿಟ್ಟು ಬಯಲಾಗಿ
ಅರಗಿನ ಅರಮನೆಯಲಿ ಬಿಣ್ಣದ ತುಹೂರಿ
ಚೆಂಡೆ ಬಾರಿಸಿ ಕಡೆಗೋಲಿಗೆ ಕಾವ ಏರಿಸಿದವನೇ

ಅಕ್ಷರದ ಅರಿವಿಲ್ಲ ಅಕ್ಕರವೇ ಬಾಳೆಲ್ಲ
ಅಮೃತ ಕಲಶವಲ್ಲಿಯರು ಅಪ್ಪಿದರು ಜಗವೆಲ್ಲ
ಪೂತನಿಯ ರಸ ಒಸರಿದ ಲಾಲಸುಂದರನೇ

ಚಿಗರೆ ಚಿನ್ನದ ಜಿಂಕೆ
ತರಳ ಲಕ್ಷ್ಮಣನಂಕೆ
ಮುರಿದು ಮುಗಿಲೇರುವ ಶಂಕೆ
ತಪ್ಪದು ಲಂಕೆ
ಜಟಾಯುವಿನ ರೆಕ್ಕೆ ತರಿವ ಸಂಚು ಹರಿದವನೇ

ಅಶೋಕ ವೃಕ್ಷದಡಿಯಲಿ ಭೂಸುತೆ
ಗರಿಯ ಗಡಿಮಾಡಿ ದಶಮುಖನ
ದಾಟುಬಾರೆಂದ ಶಕ್ತಿಸಂಚಯಕೆ ಮೊರೆಯಿಟ್ಟವನೇ

ಕಾಲಧರ್ಮಗಳ ಮೇರೆ ಮೀರಿ
ಭವಿಷ್ಯದುಸಿರುಗಳ ಅಪ್ಪಿಕೊಂಡವನೇ

ಅಪ್ಪಿಕೋ
ನಿನ್ನ ಪ್ರೀತಿಯ ತೆಕ್ಕೆಯಲ್ಲಿ
ನಮ್ಮ ತಬ್ಬಿಕೋ

‘ಮೇಧಾ’ ಮಣಿಬೇಲಿ

ಜೀವ ಹಿಡಿಯಷ್ಟು: ಹಿಡಿತ ಉಡದಷ್ಟು
ಉಡುಗದ ಕಸುವು ನರ್ಮದೆಯಷ್ಟು
ಉಡಿಯ ತುಡಿತ ತುಳುಕುವಷ್ಟು

ಊರ ತೊರೆದು ಬಂದೆ
ತೊರಸಿದ ಬೇರುಗಳ ಊರಿನಿಂದೆ
ರಘಾಡಿಸಿ ನರ್ಮದೆಯ ಒಡ್ಡು
ಬಿಡಿಸಿದೆ ನಂದನದ ಜಡ್ಡು

ರಾವಣನಂಗಳದಲಿ ಬಿಚ್ಚಿ ಹನುಮನ ಬಾಲ
ಆರಿಸುವುದಿನ್ನೆಲ್ಲಿ: ನೀರೇ ಬೆಂಕಿ

ಬಿಸಿಲುಕೋಲು ಬಾರದಿಲ್ಲಿ
ಕೊಂಬೆ ತುಂಬ ಹಸಿರು ಚೆಲ್ಲಿ
ಬಸಿರು ಉಸಿರು ಲೆಕ್ಕವೆಲ್ಲಿ
ಕಾಲ ಗೋಣು ಮುರಿದಿದೆ
ಸಾರಸಾಂದ್ರವಾಗಿದೆ

ಸಾಲಕ್ಕೆ ಸಾಲ ಹೆಣದ
ಕುಬೇರರ ಸಾಲುಸಾಲು
ಪರಾಕು
ನರ್ಮದೆಯ ಉಡಿಯಲಿ ಅಪೂರ್ವ ಸಂಪತ್ತು

ಮಣಿ ಬೇಲಿಯಲಿ ನಂದಿದ ಕಂದೀಲು
ಮಹಲು ಮನೆಗಳಲಿ ಮಿಂಚುಗೊಂಚಲು
ಮಂಗಳಾಂಗಿಯರ ಕೆನ್ನೆಯಲಿ ಕೋಲ್ಮಿಂಚು

'ಮನೆ' ಬೇಲಿಯು ಸೇರುವಾಗ
ನಿಮ್ಮ ಅಭಿವೃದ್ಧಿಯಲ್ಲಿ ಮುಳುಗಿಹೋಗಿದೆ
ಮನೆಮಕ್ಕ ತವರಿನ ಹುಡುಗಿಯರ
ತಲತಲಾಂತರ ನಾಡ

ಮಣಿಬೇಲಿಯು ಮುಂದೆ
ಬದುಕು ಬದುಕಿನ ಆಚೆ
ಮನದ ಬೇಲಿಯ ದಾಟಿ
ಮನೆ ಬೇಲಿಯ ಒಳಗೆ
ಅರಳಲು ಬೇಕಾಗಿದೆ
ಅಭ್ಯುದಯ - ವಿನಾಶದ ಹುಚ್ಚಿನ ಮಾಲೆ
ಪೋಣಿಸ ಬೇಕಿದೆ 'ಮೇಧಾ' ಮಣಿಮಾಲೆ

(ಮಣಿಬೇಲಿ : ನರ್ಮದಾ ನದಿಗೆ ಅಡ್ಡಲಾಗಿ ಕಟ್ಟುತ್ತಿರುವ
ಸರ್ದಾರ ಸರೋವರ ಅಣೆಕಟ್ಟಿನಲ್ಲಿ
ಮುಳುಗಲಿರುವ ಮಹಾರಾಷ್ಟ್ರದ ಮೊದಲ ಹಳ್ಳಿ.)

ಮೆಲ್ಲನೆ ಚುಚ್ಚೊ ಬೆರಳು

ಚಿಮ್ಮೊ ಕುದುರಿ ಮದವರಿ
ಹಾಕಿ ಬಣ್ಣದ ಜೀನು
ಬಾರೋ ಹುಡುಗ ಜೋಡಿ ಸವಾರಿ
ಮಡದಿ ಮೋಡಿ ಜೇನು

ಹಾದಿ ತುಂಬ ಚೆಲುವು ಚೆಲ್ಲು
ಮನದಲಿ ಎಷ್ಟೊ ಕಾಮನ ಬಿಲ್ಲು
ಅತ್ತ ಇತ್ತ ನೋಟ ಹೊರಳು
ಕೊಂಕಿ ವಂಕಿ ಕೊರಳು

ಎತ್ತ ನಿನ್ನ ಕೆನೆತ ನಗೆತ
ಮೆಲ್ಲನೆ ಚುಚ್ಚೊ ಬೆರಳು

ಬಗ್ಗದಿರಲಿ ಎದೆಯ ಅಂಚು
ಗಟ್ಟಿಯಿರಲಿ ಮಾಡ ಹೆಂಚು
ಚೆಲ್ಲು ಚೆಲುವು ರಸದ ರುಚಿಯು
ಮೀರದಿರಲಿ ಕಣ್ಣ ಅಂಚು.

[illegible]

[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]

[illegible]
[illegible]
[illegible]
[illegible]
[illegible]
[illegible]

ಹೂಸ್ಟನ್

ದಿನದ ಗಡಿಬಿಡಿಯಲ್ಲಿ ಕರಗಿ
ಹೋದರೂ ಕೂಡ ಮರೆಯಬೇಕೆಂದ
ಮಾವಿನ ಹಣ್ಣಂತೆ ನಿನ್ನ
ಸುತ್ತ ಗಿರಗಿಟ್ಟಲೆ ಹೊಡೆಸುವ ಪೋರಿ
ನನ್ನ ಆವರಿಸಿರುವ ತಂತಿಗಳನೆಲ್ಲ
ತುಂಡು ತುಂಡಾಗಿಸಿದರೂ ಸೆಳೆವುದು
ನಿನ್ನ ವೈರ್‌ಲೆಸ್ ಹಿಡಿತ

ಶುಕ್ರನೆಡೆಯಾಗಲಿ
ಚಂದ್ರಮಂಡಲವೇ ಆಗಲಿ
ಕಕ್ಷೆಯಲಿ ಕೆಟ್ಟ ನೌಕೆಯಾಗಲಿ
ಮಂಗಳನಲಿ ಕೈ ಸಿಕ್ಕಿಸಿಕೊಂಡ ಮರಿನೌಕೆಯಾಗಲಿ
ಕುಳಿತಲ್ಲಿಂದ ಆಡಿಸುವ ನೀ
ನನ್ನ ಹೂಸ್ಟನ್ ಕೇಂದ್ರ

ಎರಡು ಪ್ರಶ್ನೆ

'ಹ್ಞೂ' ಎಂದಿದ್ದರೆ
ನಾನೇ ಕೊಟ್ಟು ಬಿಡುತ್ತಿದ್ದನಲ್ಲಾ
ನೀನೇಕೆ ಕದ್ದಿ ನನ್ನ ಹೃದಯವನ್ನು?

ಹೋಗಲಿ
ನಿನ್ನದನ್ನಾದರೂ ಕೊಟ್ಟು ಬಿಡು
ಸುಮ್ಮನೇಕೆ ಬಿಟ್ಟಿರುವೆ
ಖಾಲಿ ಜಾಗವನ್ನು?

ದಿವಿಯ ಬಂಧು

ಅಬ್ಬರದ ಅಲೆಗಳಲಿ
ಭೀಭತ್ಸ ಸುಳಿಗಳಲಿ
ಉಪ್ಪಾದ ನಿನಗೆ
ಹಾಕಿದ್ದೇನೆ ನನ್ನದೂ
ಒಂದು ತೊಟ್ಟು ಕಣ್ಣೀರು

ಮಲ್ಲಿಗೆ ಮಲ್ಲಿ

ನಿನ್ನೆ ಸಂಜೆ ಕಂಡಾಗ
ಬಂಜರಾಗಿದ್ದೆ
ಬೆಳಗಾಗುವುದರೊಳಗೆ
ಬೆಳ್ಳಂ ಬೆಳಕಾದೆಯಲ್ಲ
ಎಲ್ಲಿ ಅಡಗಿಸಿದ್ದೆ
ಚೆಲುವಿನ ಸುಮಗಳನು

ಅಕ್ಷಯ

ಮರೆಯ ಬೇಕೆಂದು
ಗುಳಿತೋಡಿ
ಹೂತು ಬಿಡುವೆ ನಿನ್ನ

ನೀ
ಚಿಗುರೊಡೆದು
ನೂರಾಗಿ ಕಾಡುತ್ತೀಯಲ್ಲೆ ನನ್ನ

ಹುಳಿ ದ್ರಾಕ್ಷಿ

ನನಗೆ ಗೊತ್ತು
ನೀ ಹುಳಿ ದ್ರಾಕ್ಷಿ ಎಂದು
ಆದರೂ ನೆಗೆಯುವೆನು
ನಿನ್ನ ಹಿಡಿಯಲೆಂದು

ಒಮ್ಮೊಮ್ಮೆ ಅನಿಸುತ್ತೆ
ನಾ ನೆಗೆವುದು ಗೊತ್ತಾದರೆ
ನೀ ತೊಟ್ಟುಕಳಚಿ ಬೀಳುವೆಯೆಂದು

ಫಸಲು

[illegible]
[illegible]
[illegible]
[illegible]
ನನ್ನ ಭಾವಗಳ [illegible]
ಫಸಲು ತೆಗೆದಾಗ

ಕ್ಲೀಷೆ

ಎದುರಲ್ಲಿದ್ದಾಗ
ಬಿಚ್ಚೋಲೆ ಗೌರಮ್ಮ
ಮಡಿಮುತ್ತೈದೆ
ಮೆಲುನಗೆ ಮೆಲುಮಾತು
ಮುಟ್ಟಿದರೆ ಮುನಿಯುವ ನೀನು
ಎದುರಲ್ಲಿಲ್ಲದಾಗ
ಗರಿಬಿಚ್ಚಿ ನರ್ತಿಸುವೆ
ಗುಲಾಲು ಎರಚುತ ಓಕುಳಿಯಾಡುವೆ
ಕೆರಳಿದ ಕೆಂಜಡದಂತೆ ಕಚ್ಚಿ ಹಾಕುವೆ
ನಿನ್ನೀ ಕ್ಲೀಷೆಯ ಬಿಡಿಸುತ್ತ
ನಾ ಕವಿಯಾಗಿಹೆ ಗೊತ್ತೇನು.

ಮಸಲತ್ತು

ನಿನ್ನ ಕಂಡಾಗ ಹೊರಬಿತ್ತು ಅರಳುವ ಗುಟ್ಟು
ಡ್ರಾಯಿಂಗ್ ಬೋರ್ಡಿನಲ್ಲಿದ್ದ ರೇಖೆ
ಸರಳವಾಗಿ ಮೂಡಿದ ಕವನ
ಬಚ್ಚಲು ಮನೆಯಲಿ ಗುನುಗಿದ್ದ ರಾಗ
ತರಂಗ ರಂಗವಾಗಿ ಹೊಮ್ಮಿದ ಮಾತು
ಎಲ್ಲ ನಿನ್ನ ಮಸಲತ್ತೆಂದು

ಕಚಗುಳಿ

ಎದೆಎತ್ತಿ ಬಿರಬಿರನೆ ನಡೆವ
ನಿನ್ನ ಕಣ್ಣ ಸಂಧಿಸಿದ
ಬಿರುಗಣ್ಣ ನೋಟಕೆ
ಮುಖವೇಕೆ ಬಾಗಿಸಿದೆ ಹೇಳು
ಕೇಳುತಿದೆ ನನಗೆ
ನಿನ್ನೆದೆಯೊಳಗೆ ಸರಭರನೆ
ಹೂ ಬಿರಿವ ಸದ್ದು

ವಿಸ್ಡಂ

ಇವಳ
ವಿಸ್ಡಂ ವಾಷಿಂಗ್ ಬ್ರಶ್
ಮುಖಾರವಿಂದದಲಿ
ಬಸ್ಸು ಗಲ್ಲಲಿ
ವಿಸ್ಡಂದ್ದು ತೀಡಿ
ಕೋಟ್ಯಾಣುಗಳಲಿ
ವಾಶ್ ಮಾಡಿದಳು.

ಮುಂಗುರುಳು

ಕಪ್ಪು ಹುಡುಗಿ
ಹಗಲು ರಾತ್ರಿ
ಕನ್ನಡಿ ನೋಡಿ
ಮನ್ನಾಲ ಹುಡುಗಿ
ತೌಕಾರಿದಳು ಒಮ್ಮೆ
ಮುಂಗುರುಳ
ಕರಿಯಲೆಯ ನಡುವೆ
ಬಿಳಿ ಎಳೆಯ ಕಂಡು

[illegible]

[illegible]

[illegible]

ನನ್ನ
ಹೃದಯದಂಗಳದಿಂದ [illegible]
ನನ್ನ
ಹೃದಯದ [illegible]

[illegible] (೨)

([illegible])

[illegible] [illegible]

[illegible]

[illegible]

[illegible] [illegible]

[illegible]

[illegible]

[illegible]

[illegible]

[illegible]

[illegible]

[illegible] ರೂ. [illegible]/- [illegible] ರೂ. [illegible]/-

[illegible]

[illegible]

[illegible]

೧. [illegible] ಬೆಲೆ ರೂ. [illegible]/-
[illegible]

೨. [illegible] ಬೆಲೆ ರೂ. [illegible]/-
[illegible]

೩. [illegible]
[illegible] ಬೆಲೆ ರೂ. [illegible]/-
[illegible]

೪. [illegible] ಬೆಲೆ ರೂ. [illegible]/-
[illegible]
[illegible]

[illegible]

[illegible]

([illegible])



ನಲವತ್ತರ ಹರಯದಲ್ಲಿ ಮೊದಲ ಕವನ ಸಂಕಲನ ತರುತ್ತಿರುವ ಬೆಂ ಶ್ರೀ ರವೀಂದ್ರ ಬ್ಯಾಂಕಿಂಗ್ ವಲಯದಲ್ಲಿ ಪರಿಚಿತರು. ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಕನ್ನಡ ಸಂಘಗಳ ಹಾಗೂ ಬ್ಯಾಂಕ್ ಅಧಿಕಾರಿಗಳ ಸಂಘಟನೆಯ ನೇತಾರರಾಗಿ ಕ್ರಿಯಾಶೀಲರಾಗಿರುವ ರವೀಂದ್ರ ವಾಗ್ಮಿಯಾಗಿಯೂ, ಕವಿಯಾಗಿಯೂ ಗಮನ ಸೆಳೆದಿದ್ದಾರೆ. ಕಾಲೇಜು ದೆಸೆಯಲ್ಲಿ ಕವಿತೆಯನ್ನು ಅರಸುತ್ತ ಹೊರಟ ಈ ಕೊಲಂಬಸ್ ತಮ್ಮ ಅನ್ವೇಷಣೆಯಲ್ಲಿ ಒಂದು ನಿರ್ದಿಷ್ಟ ಘಟ್ಟ ತಲುಪಿದ್ದಾರೆಂದು 'ಶೂನ್ಯವಲ್ಲದೆ ಬೇರೆ' ನಿಸ್ಸಂಶಯವಾಗಿ ಸಾಬೀತುಪಡಿಸುತ್ತದೆ.

ವೈಯಕ್ತಿಕವೆನಿಸಬಹುದಾದ ಯೌವ್ವನದ, ನಡು ವಯಸ್ಸಿನ ತಳಮಳಗಳನ್ನು ಹಿತವಾಗುವಂತೆ ಹೊಮ್ಮಿಸುವ ಕೆಲವು ಕವನಗಳೂ ಇಲ್ಲಿವೆಯಾದರೂ, ಸಾಮಾಜಿಕ-ರಾಜಕೀಯ ವಿಶ್ಲೇಷಣೆ, ಚಿಂತನೆ ಕಳಕಳಿಗಳಿಂದ ತುಂಬಿದ ಪ್ರಬುದ್ಧ ಕವಿತೆಗಳದ್ದೇ ಇಲ್ಲಿ ಮೇಲುಗೈ. 'ದುಂಡು ಮುಖದ ಬಾಲೆ' ಮೊದಲ ಗುಂಪಿಗೆ ಪ್ರಾತಿನಿಧಿಕವಾಗಬಲ್ಲ ಕವಿತೆಯಾದರೆ 'ಶೂನ್ಯವಲ್ಲದೆ ಬೇರೆ' ಎಂಬ ಶೀರ್ಷಿಕಾ ಕವನ ಇನ್ನೊಂದು ಗುಂಪನ್ನು ಪ್ರತಿನಿಧಿಸುತ್ತದೆ. ಈ ಕವಿತೆಗಳ ಜೊತೆಗೆ ಚುಚ್ಚು ಹಾಸ್ಯ, ವ್ಯಂಗ್ಯ - ವಿನೋದದ ಕೆಲವು ಹನಿಗವಿತೆಗಳೂ ಸೇರಿ ಕೃತಿ ಮೈದುಂಬಿಗೊಂಡಿದೆ.

ಇದು ರವೀಂದ್ರರ ಮೊದಲ ಸಂಕಲನ. ಆದರೆ ಅದಕ್ಕಾಗಿ ಯಾವ ರಿಯಾಯಿತಿಯನ್ನು ಬಯಸದಿರುವ 'ಶೂನ್ಯವಲ್ಲದೆ ಬೇರೆ' ಅನೇಕ ಗಟ್ಟಿ ಕವಿತೆಗಳನ್ನು ಒಳಗೊಂಡಿದೆ. ರವೀಂದ್ರರ ಕಾವ್ಯದ ಬತ್ತಳಿಕೆ ತುಂಬಿಕೊಳ್ಳುತ್ತಿರಲೆಂದು ಆಶಿಸುತ್ತೇನೆ.

- ಬಿ. ಎಸ್. ಚಂದ್ರಶೇಖರ